ಕನ್ನಡಪ್ರಭ
ಮಂಗಳವಾರ 5.05.2026

ಗರಿಷ್ಠ 39°c | ಕನಿಷ್ಠ 27°c

ಸುದ್ದಿ ಸಿಂಚನ

ಮನಸ್ಸು ಪರಿವರ್ತನೆಗೊಳ್ಳಲು ಸಂಗೀತ ಅಗತ್ಯ

ಹರಪನಹಳ್ಳಿ: ಬಾಲ್ಯದಲ್ಲಿ ಮಕ್ಕಳಿಗೆ ಒಳ್ಳೆಯ ಹಾಡು ಕಲಿಸುವುದರಿಂದ ಮನಸ್ಸು ಪರಿವರ್ತನೆಗೊಳ್ಳುತ್ತದೆ. ಆಗ ಮಕ್ಕಳಲ್ಲಿ ಒರಟುತನ ಮಾಯವಾಗಿ ಮೃದುವಂತಿಕೆ ಬರುತ್ತದೆ ಎಂದು ಉಪನ್ಯಾಸಕ ಡಿ.ಅಜ್ಜಯ್ಯ ಅಭಿಪ್ರಾಯಪಟ್ಟರು. ನಗರದ ಪಂಚಮಸಾಲಿ ಬ್ಯಾಂಕ್ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯನಗರ ಇವರ ವತಿಯಿಂದ ಭಾನುವಾರ ಏರ್ಪಡಿಸಿದ್ದ ಸುಗಮ ಸಂಗೀತ ಮತ್ತು ಶಿಬಿರದ ಸಮಾರೋಪ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ಮಕ್ಕಳು ಯಾವುದೇ ವಿಷಯವನ್ನಾದರೂ ಶ್ರದ್ಧೆಯಿಂದ ಕಲಿಯಬೇಕು, ಅನೇಕ ಸಂಗತಿಗಳನ್ನು ತಿಳಿದುಕೊಳ್ಳಬೇಕು, ಇದರಿಂದ ಯಶಸ್ಸಿನ ಕಡೆ ಸಾಗಲು ಸಾಧ್ಯ ಎಂದ ಅವರು ತಮ್ಮ ಗುರಿ ಪುಟ್ಟ ಹೆಜ್ಜೆಗಳೊಂದಿಗೆ ಪ್ರಾರಂಭಿಸಿ ಹಂತ ಹಂತವಾಗಿ ದೊಡ್ಡ ಹೆಜ್ಜೆಯಾಗಿ ಯಶಸ್ಸಿನ ಶಿಖರ ಏರಬೇಕು ಎಂದು ಕಿವಿ ಮಾತು ಹೇಳಿದರು.ಸಂಗೀತ ಕಲಿಕೆ ಪ್ರಾರಂಭಿಸುವವರು ಮೊದಲು ಶಾಸ್ತ್ರೀಯ ಸಂಗೀತ ಕರಗತ ಮಾಡಿಕೊಳ್ಳಬೇಕು. ಆಗ ತಾಳ, ಲಯ, ಗತಿ ಸರಿಯಾಗಿ ತಿಳಿದುಕೊಂಡರೆ ಕಲಿಕೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ತಳವಾರ ಚಂದ್ರಪ್ಪ ಮಾತನಾಡಿ ಮೊಬೈಲ್‌ನಿಂದ ಮಕ್ಕಳನ್ನು ದೂರವಿರಿಸಲು ಇಂತಹ ಸಂಗೀತ ಕಾರ್ಯಕ್ರಮಗಳು ಉಪಯುಕ್ತವಾಗಲಿವೆ, ಕೆಲವು ಸಂಗೀತದ ಸರಳ ಪದ್ಧತಿಗಳನ್ನು ಪಾಲಿಸುವುದರಿಂದ ಮನಸ್ಸು ಶುದ್ಧಗೊಳ್ಳಲಿದೆ ಎಂದರು. ಈ ಸಂದರ್ಭದಲ್ಲಿ ಸಂಗೀತ ಶಿಕ್ಷಕ ಬಸವರಾಜ ಭಂಡಾರಿ, ತಬಲಾ ವಾದಕ ಸಾಗರ್, ವಕೀಲ ಬಸವರಾಜಪ್ಪ, ಜನನಿ, ಕೃಪಾ, ಕೀರ್ತಿ ರಾಜ್, ಅನಿಶ್, ಯಶ್, ಶ್ರೇಯಸ್ ಇದ್ದರು.

ನರಸಿಂಹ ಜಯಂತಿ

ಕಂಪ್ಲಿ: ಪಟ್ಟಣದಲ್ಲಿ ಲಕ್ಷ್ಮೀ ನರಸಿಂಹ ಜಯಂತಿ ಅತ್ಯಂತ ಶ್ರದ್ಧಾ-ಭಕ್ತಿಭಾವದಿಂದ ವಿಜೃಂಭಣೆಯಿಂದ ಆಚರಿಸಲಾಯಿತು. ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು, ಅಭಿಷೇಕಗಳು, ಅಲಂಕಾರಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳು ನಡೆಯುವ ಮೂಲಕ ಭಕ್ತರು ಭಗವಂತನ ಕೃಪೆಗೆ ಪಾತ್ರರಾದರು. ಕೋಟೆಯ ಪಟ್ಟಾಭಿರಾಮಚಂದ್ರ ದೇವಸ್ಥಾನದಲ್ಲಿ ಲಕ್ಷ್ಮೀ ನರಸಿಂಹ ಹಾಗೂ ಪಟ್ಟಾಭಿರಾಮಚಂದ್ರ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕೋಟೆಯ ಲೇಖಕ ಡಾ. ಧೀರಣ್ಣ ವೈದ್ಯರು ಲಕ್ಷ್ಮೀ ನರಸಿಂಹ ಮಹಿಮೆ ಕುರಿತು ಉಪನ್ಯಾಸ ನೀಡಿ, ಭಕ್ತ ಪ್ರಹ್ಲಾದನನ್ನು ರಕ್ಷಿಸಲು ಭಗವಾನ್ ವಿಷ್ಣು ಉಗ್ರ ನರಸಿಂಹನ ಅವತಾರ ತಾಳಿ ಹಿರಣ್ಯಕಶಿಪುವನ್ನು ಸಂಹರಿಸಿದ ಮಹತ್ವವನ್ನು ವಿವರಿಸಿದರು.ಅರ್ಚಕರಾದ ರಾಘವೇಂದ್ರಾಚಾರಿ ಗುಡಿ, ಶ್ರೀನಿವಾಸಾಚಾರ್‌ಪೌರೋಹಿತ್ಯದಲ್ಲಿ ಪಂಚಾಮೃತಾಭಿಷೇಕ, ಅಲಂಕಾರ, ತೀರ್ಥಪ್ರಸಾದ ವಿತರಣೆ ನಡೆಯಿತು. ಕೋಟೆಯ ಭಜನಾ ಮಂಡಳಿಯಿಂದ ಭಕ್ತಿಗೀತೆಗಳ ಗಾಯನ ಮಾಡಿದರು. ಪ್ರಸನ್ನ ವೈದ್ಯರು, ಗೌಡ್ರು, ಗೋಪಾಲಕೃಷ್ಣ, ದಿಗ್ಗಾವಿ ವೇಣುಗೋಪಾಲಾಚಾರ್‌ಸೇರಿದಂತೆ ಕೋಟೆ-ಪೇಟೆಯ ಅನೇಕ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಇಲ್ಲಿನ ಸತ್ಯನಾರಾಯಣಪೇಟೆಯ ವೆಂಕಟರಮಣ ದೇವಸ್ಥಾನದಲ್ಲಿ 49ನೇ ವರ್ಷದ ನರಸಿಂಹ ಜಯಂತ್ಯುತ್ಸವವನ್ನು ವಿಶೇಷವಾಗಿ ಆಚರಿಸಲಾಯಿತು. ಶ್ರೀಮನ್ನಾರಾಯಣಾಶ್ರಮದ ಪರಮಹಂಸ ನಾರಾಯಣ ವಿದ್ಯಾಭಾರತಿ ಸ್ವಾಮೀಜಿ ನರಸಿಂಹ ಅವತಾರದ ತಾತ್ಪರ್ಯವನ್ನು ವಿವರಿಸಿ ಭಕ್ತರಿಗೆ ಆಧ್ಯಾತ್ಮಿಕ ಸಂದೇಶ ನೀಡಿದರು. ಪಟ್ಟಣದ ಭಾವಸಾರ ಕ್ಷತ್ರೀಯ ಸಮಾಜದ ಶ್ರೀಪೇಟೆ ಆಂಜನೇಯ ದೇವಸ್ಥಾನದಲ್ಲೂ ನರಸಿಂಹ ಜಯಂತ್ಯುತ್ಸವವನ್ನು ಆಚರಿಸಲಾಯಿತು. ನರಸಿಂಹ ದೇವರಿಗೆ ಅರ್ಚಕರಾದ ಪ್ರಹ್ಲಾದಾಚಾರ್‌ಹಾಗೂ ಪವನ್ ಆಚಾರ್ಯರ ಪೌರೋಹಿತ್ಯದಲ್ಲಿ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.ಈ ವೇಳೆ ಸಮಾಜದ ಅಧ್ಯಕ್ಷ ವಿಶ್ವನಾಥರಾವ್ ಪುಲಸ್ಕರ್, ಉಪಾಧ್ಯಕ್ಷ ಶೇಷಾಪತಿರಾವ್ ಇದ್ದರು.



ಹರಪನಹಳ್ಳಿ ನಗರದ ಪಂಚಮಸಾಲಿ ಬ್ಯಾಂಕ್ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯನಗರ ಇವರ ವತಿಯಿಂದ ಸುಗಮ ಸಂಗೀತ ಮತ್ತು ಶಿಬಿರದ ಸಮಾರೋಪ ಕಾರ್ಯಕ್ರಮ ಜರುಗಿತು.



ಸಂಡೂರಿನಲ್ಲಿ ಎಸ್.ಪಿ.ಎಸ್ ಬ್ಯಾಂಕ್, ವೆಸ್ಕೊ ಸಂಸ್ಥೆ ಹಾಗೂ ಜಿಂದಾಲ್ ಸಂಜೀವಿನಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಹೃದಯ ಆರೋಗ್ಯ ತಪಾಸಣಾ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಹೃದಯ ಆರೋಗ್ಯ ತಪಾಸಣಾ ಶಿಬಿರ

• **ಕನ್ನಡಪ್ರಭ ವಾರ್ತೆ** ಸಂಡೂರು

ಪಟ್ಟಣದ ರತ್ನದೀಪ ಸಭಾಂಗಣದಲ್ಲಿ ಶನಿವಾರ ಎಸ್.ಪಿ.ಎಸ್ ಬ್ಯಾಂಕ್, ವೆಸ್ಕೊ ಸಂಸ್ಥೆ ಹಾಗೂ ಜಿಂದಾಲ್ ಸಂಜೀವಿನಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ತೋರಣಗಲ್ಲು ಸಹಯೋಗದಲ್ಲಿ ಉಚಿತ ಹೃದಯ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಯಿತು. ಹೃದಯ ರೋಗ ತಜ್ಞರಾದ ಡಾ.ಕಾಜಿ ಜವ್ವಾದ್ ಹುಸ್ಸೈನ್ ಶಿಬಿರಾರ್ಥಿಗಳ ಹೃದಯ ಆರೋಗ್ಯ ತಪಾಸಣೆ ನಡೆಸಿದರು. ಶಿಬಿರದಲ್ಲಿ ಬಿಪಿ, ಜಿಆರ್‌ಬಿಎಸ್, ಇಸಿಜಿ ತಪಾಸಣೆ ನಡೆಸಲಾಯಿತು. 35 ಜನರಿಗೆ ಹೆಚ್ಚಿನ ಚಿಕಿತ್ಸೆಗೆ ರೆಫರ್‌ಮಾಡಲಾಯಿತು. ಉಚಿತವಾಗಿ ಔಷಧಿಗಳನ್ನು ವಿತರಿಸಲಾಯಿತು.

ಡಾ.ಪ್ರಮೋದ್ ರೆಡ್ಡಿ, ಡಾ.ಸನ್ನಿ, ಡಾ.ಅರುಣಾ, ಡಾ.ಮಂಜುನಾಥ್, ಎಸ್‌ಪಿಎಸ್ ಬ್ಯಾಂಕಿನ ನಿರ್ದೇಶಕರಾದ ಜ್ಯೋತಿ ನಂಜುಂಡಪ್ಪ, ಸಿದ್ದಪ್ಪ ಅಂಕಮನಾಳ್, ಮಯೂರ್‌ಅಂಕಮನಾಳ್, ಕಾರ್ಯ ನಿರ್ವಾಹಕಾಧಿಕಾರಿ ಕೆ.ಪ್ರಕಾಶ್, ವ್ಯವಸ್ಥಾಪಕರಾದಶ್ವೇತಾಪಾಟೀಲ್,ಅಧಿಕಾರಿಗಳಾದ ಕುಮಾರ್‌ಎ ಶಿಂಧೆ, ಕೊಟ್ರಪ್ಪ ಎ, ವಿಜಯಲಕ್ಷ್ಮೀ ಜೆ.ಎಂ., ಪೂಜಾ ಎ, ರಾಮಚಂದ್ರ, ಜಿ.ವಿಶ್ವನಾಥ, ಎಂ.ಜಗದೀಶ್, ಸಂಜೀವಿನಿ ಆಸ್ಪತ್ರೆಯ ಸಿಬ್ಬಂದಿ ರಾಘವೇಂದ್ರ, ರಮಣಕುಮಾರ, ಶ್ರೀನಿವಾಸ, ಮಂಜುನಾಥ,ಮುಖಂಡರಾದನಾರಾಯಣಾಚಾರ್ ಉಪಸ್ಥಿತರಿದ್ದರು.

ಅಕ್ರಮ ಮರಳು ಲೂಟಿಗೆ ತೆಪ್ಪ ಬಿಟ್ಟು ಎತ್ತಿನಬಂಡಿಗೆ ಲಗ್ಗೆ

ಬರಿದಾಗುತ್ತಿದೆ ತುಂಗಭದ್ರೆಯ ಒಡಲು | ಟಾಸ್ಕ್‌ಫೋರ್ಸ್ ಸಮಿತಿ ಎಲ್ಲಿದೆ?



ಹೂವಿನಹಡಗಲಿ ತಾಲೂಕಿನ ಹರವಿ ಮತ್ತು ಮದಲಗಟ್ಟಿ ಗ್ರಾಮಗಳ ಹತ್ತಿರದ ಸೇತುವೆ ಕೆಳಗೆ ಎತ್ತಿನ ಬಂಡಿಗಳಲ್ಲಿ ಮರಳು ಲೂಟಿ ಮಾಡುತ್ತಿರುವುದು.

• **ಕನ್ನಡಪ್ರಭ ವಾರ್ತೆ** ಹೂವಿನಹಡಗಲಿ

ತುಂಗಭದ್ರಾ ನದಿಯಲ್ಲಿ ನೀರು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಇದರಿಂದ ನದಿಯಲ್ಲಿನ ಮರಳು ನಿಕ್ಷೇಪ ಸಾಕಷ್ಟು ಕಡೆಗಳಲ್ಲಿ ಹರಡಿಕೊಂಡಿದೆ. ಈ ಮರಳು ಒಂದು ರೀತಿಯಲ್ಲಿ ತೆರೆದ ಖಜಾನೆ ರೀತಿಯಲ್ಲಿದೆ. ಯಾರು ಎಷ್ಟು ಬೇಕಾದರೂ ದೋಚಬಹುದಾಗಿದೆ.

ತಾಲೂಕಿನ ಹರವಿಯಿಂದ ಹಕ್ಕಂಡಿವರೆಗೂ ತುಂಗಭದ್ರಾ ನದಿ ವ್ಯಾಪ್ತಿ ಇದೆ. ಕೆಲ ಭಾಗಗಳಲ್ಲಿ ಮಾತ್ರ ಮರಳಿನ ನಿಕ್ಷೇಪಗಳು ಇಲ್ಲ. ಉಳಿದ ಕಡೆ ಮರಳನ್ನು ಸಿಕ್ಕ ಸಿಕ್ಕವರೂ ಲೂಟಿ ಹೊಡೆದರೂ ಪ್ರಶ್ನಿಸಬೇಕಿದ್ದ ಮರಳಿನ ಟಾಸ್ಕ್ ಫೋರ್ಸ್ ಸಮಿತಿ ಮಾತ್ರ ನನಗೆ, ಇದಕ್ಕೆ ಸಂಬಂಧವಿಲ್ಲ ಎಂಬರ್ಥದಲ್ಲಿ ವರ್ತಿಸುತ್ತಿದೆ.

ಈಗಾಗಲೇ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ 6 ಮರಳಿನ ಬ್ಲಾಕ್, ಹರಪನಹಳ್ಳಿ ವ್ಯಾಪ್ತಿಯ 2 ಮರಳಿನ ಬ್ಲಾಕ್‌ಗಳನ್ನು ಗುರುತಿಸಿ ಅವುಗಳಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು 2 ತಿಂಗಳು ಕಳೆದಿವೆ. ಆದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಗುತ್ತಿಗೆ ಪಡೆದಿರುವ ಟೆಂಡರ್‌ದಾರರಿಗೆ ಈವರೆಗೂ ಕಾಮಗಾರಿ ಆದೇಶನೀಡಿಲ್ಲ.ಇದನ್ನೇಬಂಡವಾಳಮಾಡಿಕೊಂಡಿರುವ ಮರಳು ಅಕ್ರಮ ದಂಧೆಕೋರರು, ಹಗಲು ರಾತ್ರಿ ಮರಳು ಲೂಟಿಗೆ ನಿಂತಿದ್ದಾರೆ.

ಹೂವಿನಹಡಗಲಿ ತಾಲೂಕಿನ ಹರವಿ-2, ಹಿರೇಬನ್ನಿಮಟ್ಟಿ-1, ಕೊಂಬಳಿ-2, ಹಕ್ಕಂಡಿ-1 ಮರಳು ಬ್ಲಾಕ್‌ಗಳಿವೆ. ಹರಪನಹಳ್ಳಿ ತಾಲೂಕಿನಲ್ಲಿ ಕಡತಿ-1, ನಿಟ್ಟೂರು-1 ಮರಳಿನ ಬ್ಲಾಕ್‌ಗಳಿವೆ. ಸದ್ಯದ ಪರಿಸ್ಥಿತಿಯಲ್ಲಿ ನದಿಯಲ್ಲಿನ ಮರಳು ಎತ್ತಲು ಉತ್ತಮ ಅವಕಾಶವಿದೆ. ಆದರೆ ಹರಡಿಕೊಂಡಿರುವ ಮರಳನ್ನು ಲೂಟಿಗೆ ನಿಂತಿರುವ ಅಕ್ರಮ ದಂಧೆಕೋರರಿಗೆ ಕಡಿವಾಣ ಹಾಕುವವರಿಲ್ಲದಂತಾಗಿದೆ.

> **ಹರವಿ ಸೇರಿದಂತೆ ನದಿ ತೀರದ ಪ್ರದೇಶಗಳಲ್ಲಿ ಮರಳು ಅಕ್ರಮ ತಡೆಯಲು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಹಯೋಗದಲ್ಲಿ ಜಂಟಿ ದಾಳಿ ಮಾಡುತ್ತೇವೆ. ನದಿ ತೀರದಲ್ಲಿ ಟ್ರಂಚ್ ಹೊಡೆದು ತಡೆಗಟ್ಟಲು ಪ್ರಯತ್ನಿಸುತ್ತೇವೆ.**
> • **ಕೆ.ಎಂ. ಗುರುಬಸವರಾಜ** ತಹಸೀಲ್ದಾರ್

ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಇದ್ದಾಗ ಮರಳು ಲೂಟಿ ಮಾಡಲು ಕಬ್ಬಿಣದ ತೆಪ್ಪಗಳನ್ನು ಬಳಕೆ ಮಾಡುತ್ತಿದ್ದರು. ಆದರೆ ಈಗ ಲಾರಿ, ಟ್ರ್ಯಾಕ್ಟರ್‌ಗಳಲ್ಲಿ ಮರಳು ಎತ್ತಲು ಹಿಂದೇಟು ಹಾಕುತ್ತಿದ್ದಾರೆ. ಇದರ ಬದಲಿಗೆ ಲಕ್ಷಾಂತರ ರು. ಬೆಲೆಬಾಳುವ ಎತ್ತುಗಳನ್ನು ಖರೀದಿಸಿ, ಬಂಡಿಯಲ್ಲಿ ಹಗಲು ಹೊತ್ತು ಸಾಗಾಣೆ ಮಾಡಿ ತಮ್ಮ ಕಣಗಳಲ್ಲಿ ಅಕ್ರಮವಾಗಿ ಸಂಗ್ರಹಿಸುತ್ತಾರೆ. ಆ ಮರಳನ್ನು ರಾತ್ರೋರಾತ್ರಿ ಲಾರಿಗಳಲ್ಲಿ ತುಂಬಿಸಿ ದೂರದ ನಗರ ಪ್ರದೇಶಗಳಿಗೆ ಸಾಗಾಣೆ ಮಾಡುತ್ತಾರೆ.

ರಾತ್ರಿ ವೇಳೆ ನದಿ ತೀರದ ಪ್ರದೇಶಗಳಲ್ಲಿ ವ್ಯಾಪ್ತಿಯ ಹರವಿ, ಬನ್ನಿಮಟ್ಟಿ, ಮೈಲಾರ, ಕುರುವತ್ತಿ, ಲಿಂಗನಾಯಕನಹಳ್ಳಿ, ಕೊಟ್ನಿಕಲ್ಲು, ಮದಲಗಟ್ಟಿ, ಕಂದಗಲ್ಲು, ಪುರ, ಸೋವೇನಹಳ್ಳಿ, ಹಕ್ಕಂಡಿ ಭಾಗಗಳಲ್ಲಿ ಮಧ್ಯ ರಾತ್ರಿ ಲಾರಿಗಳಲ್ಲಿ ಮರಳು ಸಾಗಾಣೆಯಾಗುತ್ತಿದೆ. ಎತ್ತಿನಬಂಡಿಗಳಿಗೆ ಯಾವುದೇ ದಂಡ ಹಾಕಲು ಅವಕಾಶ ಇಲ್ಲ ಎಂಬ ಕಾರಣಕ್ಕಾಗಿ ಮರಳು ಅಕ್ರಮ ಸಾಗಾಣೆಗೆ ಪರ್ಯಾಯ ದಾರಿ ಹುಡುಕಿಕೊಂಡಿದ್ದಾರೆಂಬ ದೂರುಗಳು ಕೇಳಿ ಬರುತ್ತಿವೆ. ಮರಳು ಗಣಿಗಾರಿಕೆಯನ್ನು ತಡೆಗಟ್ಟಲು ಸರ್ಕಾರ ರಚಿಸಿರುವ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ಹತ್ತಾರು, ಇಲಾಖೆಗಳ ಅಧಿಕಾರಿಗಳಿದ್ದರೂ ತಡೆಗಟ್ಟಲು ಸಾಧ್ಯವಾಗಿಲ್ಲ.

ಪಟ್ಟಣ ಅಭಿವೃದ್ಧಿಗೆ ಆದ್ಯತೆ

ಪದಗ್ರಹಣ ಸಮಾರಂಭದಲ್ಲಿ ಪುರಸಭೆ ಅಧ್ಯಕ್ಷೆ ರೇಷ್ಮಾಬಾನು



ಹಗರಿಬೊಮ್ಮನಹಳ್ಳಿ ಪುರಸಭೆ ನೂತನ ಅಧ್ಯಕ್ಷೆಯಾಗಿ ಚುನಾಯಿತರಾಗಿದ್ದ ರೇಷ್ಮಾಬಾನು ಸಿಕಂದರ್‌ಸೋಮವಾರ ನಡೆದ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು.

• **ಕನ್ನಡಪ್ರಭ ವಾರ್ತೆ** ಹಗರಿಬೊಮ್ಮನಹಳ್ಳಿ

ಎಲ್ಲ ಸದಸ್ಯರ ವಿಶ್ವಾಸದೊಂದಿಗೆ ಪಟ್ಟಣದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಪುರಸಭೆ ನೂತನ ಅಧ್ಯಕ್ಷೆ ರೇಷ್ಮಾಬಾನು ಸಿಕಂದರ್ ತಿಳಿಸಿದರು.

ಪಟ್ಟಣದ ಪುರಸಭೆಯಲ್ಲಿ ಸೋಮವಾರ ನಡೆದ ಪದಗ್ರಹಣ ಸಮಾರಂಭದಲ್ಲಿ ನೂತನ ಅಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸಿ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಮಾಜಿ ಶಾಸಕ ಭೀಮಾನಾಯ್ಕ ನಮ್ಮ ಹೈಕಮಾಂಡ್.ಅವರಮಾರ್ಗದರ್ಶನದಲ್ಲಿ ಕೆಲಸ ಮಾಡುವೆ. ಎಲ್ಲ ಸದಸ್ಯರ ಸಹಕಾರದೊಂದಿಗೆ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದೇನೆ. ಪಟ್ಟಣದ ಎಲ್ಲ ವಾರ್ಡ್‌ಗಳ ಸಮಸ್ಯೆಗಳ ಕುರಿತು ಸಮೀಕ್ಷೆ ನಡೆಸಲಾಗುತ್ತದೆ. ನಂತರ ಅಧಿಕಾರಿಗಳೊಂದಿಗೆ ಚರ್ಚಿಸಿ ಸದಸ್ಯರ ಸಮನ್ವಯದೊಂದಿಗೆ ನಾಗರಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಅಗತ್ಯ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಅಕ್ಕಿ ತೋಟೇಶ್, ಉಪಾಧ್ಯಕ್ಷೆ ನೇತ್ರಾವರಿ ಸೆರೆಗಾರ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸಾಹಿರಾಬಾನು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೋರಿ ಗೋಣಿಬಸಪ್ಪ, ಮಹಿಳಾ ಘಟಕದ ಅಧ್ಯಕ್ಷೆ ಯಶೋದಾ ಮಂಜುನಾಥ್, ಪುರಸಭೆ ಮಾಜಿ ಅಧ್ಯಕ್ಷ ಮರಿರಾಮಣ್ಣ, ಮಾಜಿ ಅಧ್ಯಕ್ಷೆ ಕವಿತಾ ಹಾಲ್ದಾಳ್, ಮಾಜಿ ಉಪಾಧ್ಯಕ್ಷೆ ಅಂಬಿಕಾ ದೇವೇಂದ್ರಪ್ಪ, ಸದಸ್ಯರಾದ ಪವಾಡಿ ಹನಮಂತಪ್ಪ, ಉಪ್ಪಾರ ಬಾಳಪ್ಪ, ತ್ಯಾವಣಿಗಿ ಕೊಟ್ರೇಶ್, ಮುಖಂಡರಾದ ಹೆಗ್ಡಾಳು ರಾಮಣ್ಣ, ಸಿಕಂದರ್, ಅಲ್ಲಾಭಕ್ಷಿ, ಬಾಳಕೃಷ್ಣ ಬಾಬು, ಬಾರೀಕರ ಬಾಪೂಜಿ, ಸೆರೆಗಾರ್‌ಹುಚ್ಚಪ್ಪ, ಗುಂಡ್ರು ಹನಮಂತಪ್ಪ ಇದ್ದರು.

ಪುರಸಭೆ ಕಾಂಗ್ರೆಸ್ ಸದಸ್ಯರಾದ ಗಣೇಶ್, ನೆಲ್ಲು ಇಸ್ಮಾಯಿಲ್, ಡಿ.ಎಂ. ಅಜೀಜುಲ್ಲಾ ಪದಗ್ರಹಣ ಸಮಾರಂಭದಿಂದ ದೂರ ಉಳಿದು ಅಚ್ಚರಿ ಮೂಡಿಸಿದ್ದರು.

> **ಸದಸ್ಯರ ಸಮನ್ವಯದೊಂದಿಗೆ ನಾಗರಿಕರಿಗೆ ಮೂಲಭೂತ ಸೌಕರ್ಯ ಗಳನ್ನು ಒದಗಿಸುವ ಅಗತ್ಯ ಕಾಮಗಾರಿ ಗಳನ್ನು ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ.**
> • **ರೇಷ್ಮಾಬಾನು ಸಿಕಂದರ್** ಪುರಸಭೆ ನೂತನ ಅಧ್ಯಕ್ಷೆ

ಹೊಸಪೇಟೆಯಲ್ಲಿ ಸಕ್ಕರೆ ಕಾರ್ಖಾನೆ ಆರಂಭಿಸಲು ಒತ್ತಾಯ

ರೈತರ ಭೂಮಿಗಳಿಗೆ ಹಕ್ಕುಪತ್ರ ನೀಡುವಂತೆ ರೈತ ಸಂಘ ಆಗ್ರಹ | ಡಿಸಿಎಂ ಡಿಕೆಶಿಗೆ ಮನವಿ



ಹೊಸಪೇಟೆ ನಗರದಲ್ಲಿ ಸಕ್ಕರೆ ಕಾರ್ಖಾನೆ ಆರಂಭಿಸುವಂತೆ ಸೇರಿದಂತೆ ವಿವಿಧ ಬೇಡಿಕೆಗಳಿಗಳನ್ನು ಈಡೇರಿಸಬೇಕು ಎಂದು ರಾಜ್ಯ ರೈತ ಸಂಘದ ಪದಾಧಿಕಾರಿಗಳು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ನಗರದಲ್ಲಿ ಸಕ್ಕರೆ ಕಾರ್ಖಾನೆ ಆರಂಭಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಳನ್ನು ಈಡೇರಿಸುವಂತೆ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಹಂಪಿ ಕನ್ನಡ ವಿಶ್ವವಿದ್ಯಾಲಯದ ಹೆಲಿಪ್ಯಾಡ್‌ನಲ್ಲಿ ಭಾನುವಾರ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಕಳೆದ ಮೂರು ವರ್ಷಗಳಿಂದ ರಾಜ್ಯ ಸರ್ಕಾರ ಸಕ್ಕರೆ ಕಾರ್ಖಾನೆ ಆರಂಭಿಸಿಲ್ಲ. ತಕ್ಷಣವೇ ಸಕ್ಕರೆ ಕಾರ್ಖಾನೆ ಆರಂಭಿಸಬೇಕು. ಕಳೆದ 72 ವರ್ಷಗಳ ಹಿಂದೆ ತುಂಗಭದ್ರಾ ಜಲಾಶಯ ನಿರ್ಮಾಣಕ್ಕೆ ಈ ಭಾಗದ ರೈತರು ತಮ್ಮ ಫಲವತ್ತಾದ ಭೂಮಿಯನ್ನು ತ್ಯಾಗ ಮಾಡಿದ್ದಾರೆ.

ಭೂಮಿ ನೀಡಿದ ರೈತರಿಗೆ ಸರ್ಕಾರ ತಾಲೂಕಿನ ಮರಿಯಮ್ಮನಹಳ್ಳಿ ವ್ಯಾಪ್ತಿಯಲ್ಲಿ ಭೂಮಿ ನೀಡಿದೆ. ಆದರೆ ಸರ್ಕಾರ ನೀಡಿರುವ ಭೂಮಿಗೆ ಈವರೆಗೆ ಪಟ್ಟಾ ನೀಡಿಲ್ಲ. ಹಕ್ಕುಪತ್ರವಿಲ್ಲದೆ ಭೂಮಿ ನೀಡಿದ ರೈತರಿಗೆ ಯಾವುದೇ ಸೌಲಭ್ಯಗಳು ದೊರೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿ ತುಂಗಭದ್ರಾ ಜಲಾಶಯ ನಿರ್ಮಾಣ ಮಾಡಲು ಭೂಮಿ ನೀಡಿದ ರೈತರಿಗೆ ಪರ್ಯಾಯವಾಗಿ ನೀಡಲಾಗಿರುವ ಭೂಮಿಗಳಿಗೆ ಹಕ್ಕುಪತ್ರ ನೀಡಬೇಕು ಎಂದು ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಗಂಟೆ ಸೋಮಶೇಖರ್, ಮುಖಂಡರಾದ ದಮ್ಮೂರು ಮಹೇಶ್. ಯಮುನೂರ, ಬಿ.ಕೆ. ಪಂಪಾಪತಿ, ವಿ.ಕೆ. ರಾಮು, ಎಚ್.ಪರಶುರಾಮ ಸೇರಿದಂತೆ ಇತರರು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಕಾಳಿಕಾದೇವಿ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ



ಹೊಸಪೇಟೆ ನಗರದ ಕಂಚಗಾರ ಪೇಟೆಯಲ್ಲಿರುವ ಶ್ರೀಕಾಳಿಕಾದೇವಿ ದೇವಸ್ಥಾನದಲ್ಲಿ ಶಿಖರ ಪ್ರತಿಷ್ಠಾ, ಬ್ರಹ್ಮಕುಂಭ ಸ್ಥಾಪನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ನಗರದ ಬಳ್ಳಾರಿ ರಸ್ತೆಯಲ್ಲಿನ ಕಂಚಗಾರ ಪೇಟೆಯಲ್ಲಿರುವ ಕಾಳಿಕಾದೇವಿ ದೇವಸ್ಥಾನದಲ್ಲಿ ಭಾನುವಾರ ಕಾಳಿಕಾದೇವಿಯ ದೇವಸ್ಥಾನದ ನೂತನ ಗರ್ಭಗುಡಿ ಆಲಯ ಸಮರ್ಪಣೆ, ಕಾಳಿಕಾದೇವಿ ಕಮಟೇಶ್ವರ ದೇವರ, ಪರಿವಾರ ದೇವರ ಅಷ್ಟಬಂಧ ಪ್ರತಿಷ್ಠೆ, ಬ್ರಹ್ಮ ಕಲಶೋತ್ಸವ, ನವಚಂಡಿಕಾ ಯಾಗ ಕಾರ್ಯಕ್ರಮದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.ಕಾರ್ಯಕ್ರಮದ ಅಂಗವಾಗಿ ಡಿ. ಹಿರೇಹಾಳು, ಆನೆಗುಂದಿ ಸಂಸ್ಥಾನ ಸರಸ್ವತಿ ಪೀಠದ ಕಾಳಹಸ್ತೇಂದ್ರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಬೆಳಿಗ್ಗೆ ಗಣಪತಿ ಪೂಜೆ ಪುಣ್ಯಾಹ, ಅವಾಹಿತ ದೇವತಾ ಪೂಜೆ, ಪ್ರಸಾದ ಪ್ರತಿಷ್ಠಾ, ನಪುಂಸಕಶಿಲಾ ಪ್ರತಿಷ್ಠಾ, ರತ್ನ ನ್ಯಾಸ ವಿಧಿ, ಬಿಂಬ ನಯನ, ಪರಾವಾಃನ, ಅವಸ್ಥಾ ವಾಹನಾಧಿಗಳು, ಅಷ್ಟಬಂಧ ಲೇಪನ, ಕುಂಭೇಶ ನಿದ್ರಾ ಕಲಶ ಸೇಚನ, ಜೀವಾ ಕುಂಭಾಭಿಷೇಕ, ಜೀವಾವಾಹನ, ಸ್ಥೂಲವಾಃನ, ಪ್ರಾಣಪ್ರತಿಷ್ಠಾಧಿಗಳು, ಶಿಖರ ಪ್ರತಿಷ್ಠೆ, ಬ್ರಹ್ಮ ಮಂಡಲ ಪೂಜೆ, ಬ್ರಹ್ಮಕುಂಭ ಸ್ಥಾಪನೆ, ಮಂಡಲ ಪೂಜೆ, ಆಧಿವಾಸಹೋಮ ಬಲಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು.

ದಾನಿಗಳ ಸನ್ಮಾನ: ದೇವಸ್ಥಾನದ ಆವರಣದಲ್ಲಿ ಭಾನುವಾರ ಮಧ್ಯಾಹ್ನ ನಡೆದ ದಾನಿಗಳ ಸನ್ಮಾನ ಸಮಾರಂಭದಲ್ಲಿ ಕಾಳಿಕಾದೇವಿ ನೂತನ ದೇವಸ್ಥಾನಕ್ಕೆ ಚಿನ್ನಲೇಪಿತ ಕಳಸ ದೇಣಿಗೆ ನೀಡಿದ ಆಂಧ್ರದ ಶಿಲ್ಪಿ ಕೆ. ಗುಂಡಾಚಾರ್ಯ ಹಾಗೂ ಶ್ರೀನಿವಾಸ್ ಆಚಾರ್ಯ ಸಹೋದರರನ್ನು ಸನ್ಮಾನಿಸಲಾಯಿತು.

ಧಾರ್ಮಿಕ ಕಾರ್ಯಕ್ರಮಗಳಲ್ಲಿ ಶಾಸಕ ಎಚ್.ಆರ್.ಗವಿಯಪ್ಪ, ವಿಶ್ವಕರ್ಮ ಸಮಾಜದ ಅಧ್ಯಕ್ಷ ಸಿ.ರಾಜಣ್ಣ, ಉಪಾಧ್ಯಕ್ಷ ವಿ.ಶಂಕರಾಚಾರ್ಯ, ಪ್ರಧಾನ ಕಾರ್ಯದರ್ಶಿ ಕೆ.ಸುರೇಶ್ ಶಿಲ್ಪಿ, ವಿಜಯನಗರ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಕೆ.ವಿ. ಪತ್ತಾರ ಸೇರಿದಂತೆ ಸಮಾಜದ ಮುಖಂಡರು, ಕಾಳಿಕಾಂಬ ಮಹಿಳಾ ಮಂಡಳಿ ಸದಸ್ಯರು ಸೇರಿದಂತೆ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಬಿಎಸ್‌ವೈ ಕೊಡುಗೆ | ಚಿತ್ರದುರ್ಗದಲ್ಲಿ ಮೇ 9 ರಂದು ನಡೆಯಲಿದೆ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ

ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಬಳ್ಳಾರಿಯ 25 ಸಾವಿರ ಜನ ಭಾಗಿ

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಸುದೀರ್ಘ 50 ವರ್ಷಗಳ ಯಶಸ್ವಿ ರಾಜಕಾರಣ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9 ರಂದು ಹಮ್ಮಿಕೊಂಡಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಬಳ್ಳಾರಿ ಜಿಲ್ಲೆಯಿಂದ 25 ಸಾವಿರ ಜನ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಬೆಂಬಲಿಗರು ತೆರಳಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ವೈ.ಎಂ.ಸತೀಶ್ ಹಾಗೂ ಪಕ್ಷದ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್‌ಮೋಕಾ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ಬಂಧು, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಧೀಮಂತ ನಾಯಕ ಎನಿಸಿದ ಯಡಿಯೂರಪ್ಪ ಈ ನಾಡು ಕಂಡ ಅತ್ಯಂತ ಶ್ರೇಷ್ಠ ಜನನಾಯಕರಾಗಿದ್ದಾರೆ. ರಾಜ್ಯದಲ್ಲಿ



ವಿಪ ಸದಸ್ಯ ವೈ.ಎಂ.ಸತೀಶ್, ಪಕ್ಷದ ಜಿಲ್ಲಾಧ್ಯಕ್ಷ ಅನಿಲಕುಮಾರ್ ಮೋಕಾ ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ ಬಿಎಸ್‌ವೈ ಅಭಿಮಾನೋತ್ಸವ ಕುರಿತು ಮಾಹಿತಿ ನೀಡಿದರು.

ಪಕ್ಷವನ್ನು ಸಂಘಟಿಸುವಲ್ಲಿ ಮುಂಚೂಣಿ ವಹಿಸಿದ್ದ ಅವರು ರಾಜ್ಯದಾದ್ಯಂತ ಓಡಾಡಿ ಪಕ್ಷವನ್ನು ಬುಡಮಟ್ಟದಿಂದ ಗಟ್ಟಿಗೊಳಿಸಿದವರು. ಅವರ ನಿರಂತರ ಅವಿರತ ಶ್ರಮದಿಂದಾಗಿಯೇ ಕರ್ನಾಟಕದಲ್ಲಿ ಬಿಜೆಪಿಯ ಕಮಲ ಅರಳಲು ಸಾಧ್ಯವಾಯತು. ಪಕ್ಷಕ್ಕೆ ಹಾಗೂ ನಾಡಿಗೆ ಅಪೂರ್ವವಾದ ಕೊಡುಗೆ ನೀಡಿರುವ ಬಿ.ಎಸ್. ಯಡಿಯೂರಪ್ಪ ರಾಜಕಾರಣಕ್ಕೆ ಆಗಮಿಸಿ ಸುದೀರ್ಘ 50 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರೇ ಹಮ್ಮಿಕೊಂಡಿರುವ ಬಿಎಸ್‌ವೈ ಅಭಿಮಾನೋತ್ಸವಕ್ಕೆ ದೇಶದ ನಾನಾ ಕಡೆಗಳಿಂದ ಪಕ್ಷದ ಸಹಸ್ರಾರು ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳು ಆಗಮಿಸುತ್ತಿದ್ದಾರೆ. ಸುಮಾರು 7 ರಿಂದ 8 ಲಕ್ಷ ಜನರು ಕಾರ್ಯಕ್ರಮಕ್ಕೆ ಜಮಾಯಿಸುವ ಸಾಧ್ಯತೆಯಿದೆ. ಹೀಗಾಗಿ ಬಳ್ಳಾರಿ ಜಿಲ್ಲೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರದುರ್ಗಕ್ಕೆ ತೆರಳುತ್ತಿದ್ದಾರೆ. ಈಗಾಗಲೇ ಸಭೆಗಳನ್ನು ಮಾಡಿಕೊಂಡು ಚಿತ್ರದುರ್ಗಕ್ಕೆ ಹೋಗುವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪಗೂ ಬಳ್ಳಾರಿಗೆ ಅನ್ಯೋನ್ಯ ನಂಟಿದೆ. ಈ ಹಿಂದೆ ಪಕ್ಷವನ್ನು ಸಂಘಟಿಸುವಾಗಲೂ ಬಳ್ಳಾರಿಗೆ ಆಗಮಿಸಿ, ಪಕ್ಷದ ಕಾರ್ಯಕರ್ತರನ್ನು ಹುರಿದುಂಬಿಸಿದ್ದಾರೆ. ಇಲ್ಲಿನ ಅನೇಕ ಮುಖಂಡರ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡು ಬಳ್ಳಾರಿಯಲ್ಲಿ ಬಿಜೆಪಿ ರಾಜಕೀಯ ದೊಡ್ಡ ಶಕ್ತಿಯಾಗಿ ಹೊರಹೊಮ್ಮುವಲ್ಲಿ ಬಿಎಸ್‌ವೈ ಅವರ ಪಾತ್ರ ದೊಡ್ಡದಿದೆ. ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಬಳ್ಳಾರಿಗೆ ಆಗಮಿಸಿ ಅನೇಕ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಪಕ್ಷ ಸಂಘಟನೆ ಕೆಲಸಕ್ಕೆ ಸಹ ಸಾಕಷ್ಟು ಬಾರಿ ಬಂದಿದ್ದಾರೆ. ಅವರ ಅಧಿಕಾರ ಅವಧಿಯಲ್ಲಿ ಬಳ್ಳಾರಿ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಹೀಗಾಗಿ ಪಕ್ಷದ ಸಾವಿರಾರು ಕಾರ್ಯಕರ್ತರು ಚಿತ್ರದುರ್ಗಕ್ಕೆ ತೆರಳುವ ಮೂಲಕ ಅಭಿಮಾನೋತ್ಸವದಲ್ಲಿ ಅತ್ಯಂತ ಪ್ರೀತಿ, ಅಭಿಮಾನದಿಂದ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಪಕ್ಷದ ಜಿಲ್ಲಾ ಪ್ರಮುಖರಾದ ಮುರಹರಗೌಡ ಗೋನಾಳ್, ಗುತ್ತಿಗನೂರು ವಿರುಪಾಕ್ಷಗೌಡ, ಶಂಕ್ರಪ್ಪ, ಅಡವಿಸ್ವಾಮಿ, ಶಂಕ್ರಪ್ಪ, ರಾಮಾಂಜಿನಿ, ಮಲ್ಲೇಶ್ ಕುಮಾರ್‌ಸುದ್ದಿಗೋಷ್ಠಿಯಲ್ಲಿದ್ದರು.

> **ಯಡಿಯೂರಪ್ಪ ಈ ನಾಡು ಕಂಡ ಅತ್ಯಂತ ಶ್ರೇಷ್ಠ ಜನನಾಯಕರಾಗಿದ್ದಾರೆ. ರಾಜ್ಯದಲ್ಲಿ ಪಕ್ಷವನ್ನು ಸಂಘಟಿಸುವಲ್ಲಿ ಮುಂಚೂಣಿ ವಹಿಸಿದ್ದ ಅವರು ರಾಜ್ಯದಾದ್ಯಂತ ಓಡಾಡಿ ಪಕ್ಷವನ್ನು ಬುಡಮಟ್ಟದಿಂದ ಗಟ್ಟಿಗೊಳಿಸಿದವರು.**
> • **ವೈ.ಎಂ.ಸತೀಶ್** ವಿಧಾನಪರಿಷತ್ ಸದಸ್ಯ

ಪಶ್ಚಿಮ ಬಂಗಾಳದಲ್ಲಿ ಪಕ್ಷದ ಸಾಧನೆ ದೇಶದಾದ್ಯಂತ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತುಂಬಿದೆ. ಪಶ್ಚಿಮ ಬಂಗಾಳದಲ್ಲಿ ಪಕ್ಷದ ಸಾಧನೆ ದೇಶದಾದ್ಯಂತ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತುಂಬಿದೆ. ಪಶ್ಚಿಮ ಬಂಗಾಳದಲ್ಲಿ ಪ್ರಾಬಲ್ಯ ಹೊಂದಿದ್ದ ಪ್ರಾದೇಶಿಕ ಪಕ್ಷವಾದ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಮಣಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ.
• **ಅನಿಲಕುಮಾರ್ ಮೋಕಾ** ಬಳ್ಳಾರಿ ಬಿಜೆಪಿ ಜಿಲ್ಲಾಧ್ಯಕ್ಷ

ಸುದ್ದಿ ಸಿಂಚನ

3 ಕಡೆ ಬಿಜೆಪಿ ಅಧಿಕಾರ: ಕೂಡ್ಲಿಗಿಯಲ್ಲಿ ಸಂಭ್ರಮ

ಕೂಡ್ಲಿಗಿ: ಪಂಚರಾಜ್ಯಗಳ ಚುನಾವಣೆಯಲ್ಲಿ 3 ರಾಜ್ಯಗಳಲ್ಲಿ ಬಿಜೆಪಿ ಗೆದ್ದು ಬೀಗಿದ್ದು, ಆಡಳಿತ ಚುಕ್ಕಾಣಿ ಹಿಡಿಯಲು ಮುಂದಾಗಿದ್ದರಿಂದ ಕೂಡ್ಲಿಗಿ ತಾಲೂಕಿನ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಟ್ಟಣದ ಮದಕರಿನಾಯಕ ವೃತ್ತದಲ್ಲಿ ಸೇರಿ ಪರಸ್ಪರ ಸಿಹಿ ತಿನಿಸಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.ಬಿಜೆಪಿ ಹಿರಿಯ ಮುಖಂಡ ಸೂರ್ಯಪಾಪಣ್ಣ ಮಾತನಾಡಿ, ಕೇಂದ್ರ ಸರ್ಕಾರದ ಮೋದಿ ಆಡಳಿತದ ವೈಖರಿ, ದೂರದೃಷ್ಟಿ ರಾಜಕಾರಣದ ಪ್ರಭಾವದಿಂದ ಬಿಜೆಪಿ ಇಡೀ ದೇಶವನ್ನೇ ಆವರಿಸುತ್ತಿದೆ. ಕಾಂಗ್ರೆಸ್‌ನ ದುರಾಡಳಿತ, ಅಲ್ಪಸಂಖ್ಯಾತರ ಓಲೈಕೆ ರಾಜಕಾರಣದಲ್ಲಿ ತೊಡಗಿದ್ದರ ಪರಿಣಾಮ ಕಾಂಗ್ರೆಸ್ ಇನ್ನಿಲ್ಲದಂತೆ ನೆಲಕಚ್ಚಿದೆ. ಪಶ್ಚಿಮ ಬಂಗಾಳದಲ್ಲಿ ದೀದಿಯ ದುರಾಡಳಿತ, ಸರ್ವಾಧಿಕಾರ ಧೋರಣೆಗೆ ಜನತೆ ಬೇಸತ್ತು ಬಿಜೆಪಿ ಗೆಲ್ಲಿಸಿದ್ದಾರೆ. ದೇಶದಲ್ಲಿ ಎಲ್ಲ ಮೂಲೆ ಮೂಲೆಗಳಲ್ಲಿ ಬಿಜೆಪಿ ಬಾವುಟ ರಾರಾಜಿಸುತ್ತಿವೆ. ದೇಶದ ರಾಜಕಾರಣದಲ್ಲಿ ಆಶಾದಾಯಕ ಬೆಳವಣಿಗೆಯಾಗುತ್ತಿದೆ ಎಂದರು.

ಇಂದು ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ

ಸಂಡೂರು: ಕಸಾಪ ತಾಲೂಕು ಘಟಕದಿಂದ ಪಟ್ಟಣದ ಗುರುಭವನದಲ್ಲಿ ಮೇ 5ರಂದು ಸಂಜೆ 6.30ಕ್ಕೆ ಕಸಾಪನ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಪ್ರಭುದೇವರ ಸಂಸ್ಥಾನ ವಿರಕ್ತಮಠದ ಪ್ರಭುಸ್ವಾಮೀಜಿ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಐ.ಆರ್. ಅಕ್ಕಿ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಕಸಾಪ ತಾಲೂಕು ಘಟಕದ ಅಧ್ಯಕ್ಷ ಬಿ. ನಾಗನಗೌಡ ವಹಿಸಲಿದ್ದಾರೆ. ರಾಯಚೂರು ನಗರದ ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಉಪ ಕುಲಸಚಿವ ಡಾ.ಕೆ.ವೆಂಕಟೇಶ್ ಉಪನ್ಯಾಸ ನೀಡಲಿದ್ದಾರೆ. ಸಾಧಕರಿಗೆ ಗೌರವ ಸನ್ಮಾನ ಕಾರ್ಯಕ್ರಮದಡಿ ನಾಡೋಜ ಡಾ.ವಿ.ಟಿ. ಕಾಳೆ, ಡಾ. ವಸುಂಧರಾ ಭೂಪತಿ, ಡಾ. ನಿಷ್ಠಿ ರುದ್ರಪ್ಪ, ಡಾ.ತಿಪ್ಪೇರುದ್ರ ಸಂಡೂರು ಅವರನ್ನು ಸನ್ಮಾನಿಸಲಾಗುವುದು. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಡಾ. ಜಗದೀಶ ಬಸಾಪುರ, ಬಿ. ಆರ್. ಮಸೂತಿ ಹಾಗೂ ಸಿ.ಎಂ. ಶಿಗ್ಗಾವಿ ಅವರು ಭಾಗವಹಿಸಲಿದ್ದಾರೆ.

6ರಿಂದ ಕೆ.ವಿ. ಕಾಳೆಯವರ ಕಲಾಕೃತಿಗಳ ಪ್ರದರ್ಶನ



ಬಳ್ಳಾರಿ: ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಮೇ 6ರಿಂದ 10ರವರೆಗೆ ಜರುಗುವ 2ನೇ ರಾಷ್ಟ್ರಮಟ್ಟದ ಚಿತ್ರಕಲೆ ಪ್ರದರ್ಶನದಲ್ಲಿ ಸಂಡೂರಿನ ಅಂತರಾಷ್ಟ್ರೀಯ ಖ್ಯಾತ ಚಿತ್ರಕಲಾವಿದ ಕೆ.ವಿ.ಕಾಳೆ ಅವರ ಕಲಾಕೃತಿಗಳು ಪ್ರದರ್ಶನಗೊಳ್ಳಲಿವೆ. ಕಲಾ ಪ್ರದರ್ಶನದಲ್ಲಿ ದೇಶದ ವಿವಿಧ ರಾಜ್ಯಗಳ 150ಕ್ಕೂ ಹೆಚ್ಚು ಕಲಾವಿದರು ತಮ್ಮ ಕಲಾಕೃತಿಗಳನ್ನು ಪ್ರದರ್ಶನಕ್ಕಿಡಲಿದ್ದು ಕೆ.ವಿ.ಕಾಳೆ ಅವರ ವಿವಿಧ ಬಗೆಯ ವರ್ಣರಂಜಿತ ವರ್ಣಚಿತ್ರಗಳು ಪ್ರದರ್ಶನಗೊಳ್ಳಲಿವೆ. ನಾಡಿನ ಖ್ಯಾತ ಕಲಾವಿದ ನಾಡೋಜ ವಿ.ಟಿ.ಕಾಳೆ ಅವರ ಪುತ್ರ ಕೆ.ವಿ.ಕಾಳೆ ಅವರು ವಿಶಿಷ್ಟವಾಗಿ ಕಲಾಕೃತಿಗಳನ್ನು ರಚಿಸುವ ಮೂಲಕ ಕಲಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ದೇಶ-ವಿದೇಶಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ.

ಗೋಡೆ ಕುಸಿದು ವ್ಯಕ್ತಿ ಸಾವು


ಕೂಡ್ಲಿಗಿ: ತಾಲೂಕಿನ ಕಾನಹೊಸಹಳ್ಳಿಯಲ್ಲಿ ಮನೆಯ ಗೋಡೆ ಕುಸಿದು ವ್ಯಕ್ತಿ ಮೃತಪಟ್ಟ ಘಟನೆ ಶನಿವಾರ ಸಂಜೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ರಂಗನಾಥನಹಳ್ಳಿ ಬಸವರಾಜಪ್ಪ (54) ಮೃತ ದುರ್ದೈವಿ. ಹೊಸಹಳ್ಳಿ ಗ್ರಾಮದ ಉಜ್ಜಿನಿ ರಸ್ತೆಯಲ್ಲಿ ಹೊಸ ಮನೆಯ ಕಾಮಗಾರಿ ವೇಳೆ ಪಕ್ಕದಲ್ಲಿದ್ದ ಹಳೆಯ ಕಲ್ಲಿನ ಗೋಡೆ ಕುಸಿದ ಪರಿಣಾಮ ಗೋಡೆಯಡಿ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹೊಸಮನೆಯ ಬುನಾದಿ ಹಾಗೂ ಹಳೆ ಗೋಡೆಯ ನಡುವೆ ನೀರಿನ ಸಂಪುಗಾಗಿ ಪಾಯ ತೆಗೆದು ಕೆಲಸಗಾರರು ಹೋದ ವೇಳೆ ಮನೆಯ ಮಾಲೀಕ ಮಣ್ಣು ಸಮತಟ್ಟು ಮಾಡಲು ಹೋಗಿದ್ದ. ಈ ವೇಳೆ ಬಸವರಾಜಪ್ಪನ ಮೇಲೆ ಏಕಾಏಕಿ ಗೋಡೆ ಕುಸಿದು ಬಿದ್ದಿದೆ. ಪರಿಣಾಮ ತೀವ್ರಗಾಯಗೊಂಡು ಸ್ಥಳದಲ್ಲಿ ಮೃತಪಟ್ಟಿದ್ದಾನೆ. ಈ ವಿಷಯ ತಿಳಿಯುತ್ತಿದ್ದಂತೆ ಸ್ಥಳೀಯ ಠಾಣೆಯ ಪಿಎಸ್ಐ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಸ್ಥಳೀಯರ ಸಹಕಾರದಿಂದ ಕಾರ್ಯಾಚರಣೆ ನಡೆಸಿ ಶವವನ್ನು ಹೊರತೆಗೆದರು.



ಫಸಲ್ ಬಿಮಾ ಯೋಜನೆಯಲ್ಲಿ ಭಾರೀ ಅಕ್ರಮ ನಡೆದಿದ್ದು, ಈ ಬಗ್ಗೆ ತನಿಖೆಗೆ ಒತ್ತಾಯಿಸಿ ರಾಜ್ಯ ರೈತ ಸಂಘದಿಂದ ಹೊಸಪೇಟೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ರೈತ ಮುಖಂಡರು ಇದ್ದರು.



ಹರಪನಹಳ್ಳಿಯಲ್ಲಿ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಜಯ ಗಳಿಸಿದ್ದಕ್ಕೆ ಪ್ರಗತಿಪರ ಶಿಕ್ಷಕರ ವೇದಿಕೆಯಿಂದ ಶಾಸಕಿ ಎಂ.ಪಿ.ಲತಾ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಹಲವರು ಉಪಸ್ಥಿತರಿದ್ದರು.



ಹಗರಿಬೊಮ್ಮನಹಳ್ಳಿ ತಾಲೂಕಿಗೆ ಅತಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿನಿ ಸಹನಾ ಅವರನ್ನು ಮಾಜಿ ಶಾಸಕರಾದ ಭೀಮಾನಾಯ್ಕ ಸನ್ಮಾನಿಸಿ ಮುಂದಿನ ಶೈಕ್ಷಣಿಕ ವೆಚ್ಚಕ್ಕಾಗಿ ₹25 ಸಾವಿರ ವೈಯಕ್ತಿಕ ಧನ ಸಹಾಯ ನೀಡಿದರು.

ಅಖಂಡ ಜಿಲ್ಲೆಯ ವಿವಿಧೆಡೆ ಬಿಜೆಪಿ ಕಾರ್ಯಕರ್ತರು, ಅಭಿಮಾನಿಗಳಿಂದ ಪಟಾಕಿ ಸಿಡಿಸಿ ಸಂಭ್ರಮ | ಬೈಕ್‌ಗಳಲ್ಲಿ ಬಾವುಟ ಪ್ರದರ್ಶನ

ಚುನಾವಣಾ ಫಲಿತಾಂಶ: ಬಿಜೆಪಿ ವಿಜಯೋತ್ಸವ



ಪಶ್ಚಿಮ ಬಂಗಾಳ ಚುನಾವಣೆ ಫಲಿತಾಂಶ ಹಿನ್ನಲೆಯಲ್ಲಿ ಬಳ್ಳಾರಿಯ ಗಡಗಿಚನ್ನಪ್ಪ ವೃತ್ತದಲ್ಲಿ ಸೋಮವಾರ ಬಿಜೆಪಿಯ ನೂರಾರು ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸಾಧಿಸಿದ ಗಮನಾರ್ಹ ಗೆಲುವಿನ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಸೋಮವಾರ ವಿಜಯೋತ್ಸವ ಆಚರಿಸಿದರು.

ಇಲ್ಲಿನ ಗಡಗಿಚನ್ನಪ್ಪ ವೃತ್ತದಲ್ಲಿ ಜಮಾಯಿಸಿದ ಪಕ್ಷದ ನೂರಾರು ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಪಕ್ಷದ ಧ್ವಜಗಳನ್ನು ಹಾರಿಸಿ ಭಾರತ್ ಮಾತಾ ಕಿ ಜೈ, ಬಿಜೆಪಿಗೆ ಜಯವಾಗಲಿ, ನರೇಂದ್ರ ಮೋದಿಗೆ ಜಯವಾಗಲಿ ಇತ್ಯಾದಿ ಘೋಷಣೆಗಳನ್ನು ಕೂಗಿದರು.

ಇದೇ ವೇಳೆ ಮಾತನಾಡಿದ ಪಕ್ಷದ ಜಿಲ್ಲಾಧ್ಯಕ್ಷ ಅನಿಲಕುಮಾರ್ ಮೋಕಾ, ಪಕ್ಷದ ಮಹಿಳಾ ಮೋರ್ಚಾದ ರಾಜ್ಯ ಮುಖಂಡರಾದ ಡಾ. ಅರುಣಾ ಕಾಮಿನೇನಿ, ಪಶ್ಚಿಮ ಬಂಗಾಳದಲ್ಲಿ ಪಕ್ಷದ ಸಾಧನೆ ದೇಶದಾದ್ಯಂತ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತುಂಬಿದೆ. ಪಶ್ಚಿಮ ಬಂಗಾಳದಲ್ಲಿ ಪ್ರಾಬಲ್ಯ ಹೊಂದಿದ್ದ ಪ್ರಾದೇಶಿಕ ಪಕ್ಷವಾದ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಮಣಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಪಶ್ಚಿಮ ಬಂಗಾಳದ ಫಲಿತಾಂಶವು ಪಕ್ಷದ ನೀತಿಗಳ ಮೇಲೆ ಜನರ ವಿಶ್ವಾಸವನ್ನು ಪ್ರತಿಬಿಂಬಿಸಿದೆ ಎಂದರು.

ಈ ಗೆಲುವು ದೇಶದಾದ್ಯಂತ ಕಾರ್ಯಕರ್ತರಿಗೆ ಹೊಸ ಶಕ್ತಿ ನೀಡಿದ್ದು, ಮುಂದಿನ ದಿನಗಳಲ್ಲಿ ಪಕ್ಷವನ್ನು ಇನ್ನಷ್ಟು ಬಲಪಡಿಸಲು ಪ್ರೇರಣೆಯಾಗಲಿದೆ ಎಂದು ತಿಳಿಸಿದರು.

ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿಯವರ ಸರ್ಕಾರ ಜನಪರವಾಗಿರಲಿಲ್ಲ. ಬಡ ಹಾಗೂ ಮಧ್ಯಮವರ್ಗದ ಹಿತಕಾಯುವಲ್ಲಿ ವಿಫಲವಾಗಿತ್ತು. ಹೀಗಾಗಿಯೇ ಕಳೆದ 15 ವರ್ಷಗಳಿಂದ ಅಧಿಕಾರದಲ್ಲಿದ್ದ ಮಮತಾ ಬ್ಯಾನರ್ಜಿ ಅವರ ಪಕ್ಷವು ಹೀನಾಯ ಸೋಲು ಕಂಡಿದೆ. ಈ ಮೂಲಕ ಮಮತಾ ಅವರ ಆಳ್ವಿಕೆ ಕೊನೆಗೊಂಡಿದೆ. ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಅನೇಕ ದೇಶ ಅಭಿವೃದ್ಧಿ ನೆಲೆಯ ಯೋಜನೆಗಳು ಬಂಗಾಳ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಜಯ ಸಾಧಿಸಲು ಆಸ್ಪದ ಒದಗಿಸಿತು. ಪಶ್ಚಿಮ ಬಂಗಾಳದಲ್ಲಿ ಎರಡೂವರೆ ದಶಕಗಳ ಕಾಲ ಆಳಿದ್ದ ಎಡ ಪಕ್ಷಗಳು ಹೇಳ ಹೆಸರಿಲ್ಲದಂತೆ ಸೋಲುಂಡಿವೆ. ತೃಣಮೂಲ ಕಾಂಗ್ರೆಸ್ ಕೂಡ ಎಡ ಪಕ್ಷಗಳ ಹಾದಿ ತುಳಿದಿದೆ. ದೇಶದ ಜನರು ಅಭಿವೃದ್ಧಿ ಬಯಸುತ್ತಿದ್ದಾರೆ. ಸಮಗ್ರ ಕಲ್ಯಾಣಕ್ಕಾಗಿ ಹಾತೊರೆಯುತ್ತಿದ್ದಾರೆ. ಕೇಂದ್ರ ಸರ್ಕಾರದ ಕಾರ್ಯವೈಖರಿಯನ್ನು ದೇಶದ ಜನರು ಮೆಚ್ಚುಕೊಂಡಿದ್ದಾರೆ. ಹೀಗಾಗಿಯೇ ಪ್ರತಿ ಚುನಾವಣೆಯಲ್ಲೂ ಬಿಜೆಪಿಯ ಮತದಾನದ ಪ್ರಮಾಣ ಏರಿಕೆಯಾಗುತ್ತದಲೇ ಇದೆ ಎಂದು ತಿಳಿಸಿದರು.

ಪಂಚರಾಜ್ಯಗಳ ಚುನಾವಣೆ ಫಲಿತಾಂಶ ಬಿಜೆಪಿಗೆ ಹೊಸ ಹುರುಪು ನೀಡಿದೆ. ನಿರೀಕ್ಷೆಯಂತೆ ಅಸ್ಸಾಂನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದು, ಉಳಿದ ರಾಜ್ಯಗಳಲ್ಲೂ ಬಿಜೆಪಿ ಗಮನಾರ್ಹ ಮತಗಳನ್ನು ಪಡೆದು ಪಕ್ಷ ಸಂಘಟನೆಯ ಮುನ್ಸೂಚನೆ ನೀಡಿದೆ. ಬರುವ ದಿನಗಳಲ್ಲಿ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳತ್ತ ಗಮನ ಹರಿಸಲಾಗುವುದು. ದೇಶದ ಎಲ್ಲ ರಾಜ್ಯಗಳಲ್ಲಿ ಬಿಜೆಪಿಯ ಪತಾಕೆ ಹಾರಿಸಲಾಗುವುದು ಎಂದು ತಿಳಿಸಿದರು.

ಪಕ್ಷದ ಹಿರಿಯ ಮುಖಂಡ ಕೆ.ಎ. ರಾಮಲಿಂಗಪ್ಪ, ಮಾಜಿ ಸಂಸದ ಸಣ್ಣ ಪಕ್ಕೀರಪ್ಪ, ಪಕ್ಷದ ಮುಖಂಡರಾದ ಕೆ.ಎಸ್. ದಿವಾಕರ, ಪಾಲಿಕೆ ಸದಸ್ಯರಾದ ಸುರೇಖಾ ಮಲ್ಲನಗೌಡ, ಗುಡಿಗಂಟಿ ಹನುಮಂತು, ಬಿಜೆಪಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಹಂಪಿ ರಮಣ, ಚಾಂದಿನಿ ಸೇರಿದಂತೆ ಪಕ್ಷದ ನೂರಾರು ಕಾರ್ಯಕರ್ತರು ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ್ದರು.

ಬಂಗಾಳದಲ್ಲಿ ಬಿಜೆಪಿ ಗೆಲುವು ಹಿನ್ನೆಲೆಯಲ್ಲಿ ಕಾರ್ಯಕರ್ತರು ನಗರದಲ್ಲಿ ಬೈಕ್‌ಗಳ ಮೇಲೆ ಪಕ್ಷದ ಬಾವುಟಗಳನ್ನು ಹಿಡಿದು ಮೆರವಣಿಗೆ ಮಾಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಪರ ಘೋಷಣೆಗಳನ್ನು ಕೂಗಿದರು. ಅಖಂಡ ಬಳ್ಳಾರಿ ಜಿಲ್ಲೆಯ ನಾನಾ ಕಡೆ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದ್ದಾರೆ.

ಬಿಜೆಪಿಯಿಂದ ವಿಜಯೋತ್ಸವ



• **ಕನ್ನಡಪ್ರಭ ವಾರ್ತೆ** ಹರಪನಹಳ್ಳಿ

ಪಶ್ಚಿಮ ಬಂಗಾಲ, ಅಸ್ಸಾಂ, ಪುದುಚೇರಿಗಳಲ್ಲಿ ಭಾರತೀಯ ಜನತಾ ಪಾರ್ಟಿ ಗೆಲುವು ಸಾಧಿಸಿದ್ದಕ್ಕೆ ಹರಪನಹಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಇಲ್ಲಿಯ ಬಿಜೆಪಿ ಕಚೇರಿಯಲ್ಲಿ ಮಾಜಿ ಸಚಿವ ಗಾಲಿ ಕರುಣಾಕರರೆಡ್ಡಿ ನೇತೃತ್ವದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಯಡಿಹಳ್ಳಿ ಶೇಖರಪ್ಪ ಸಿಹಿ ವಿತರಿಸಿ ಸಂಭ್ರಮಿಸಿದರು. ಮಲ್ಲೇಶ, ವಿಜಯಲಕ್ಷ್ಮಿ, ಮಂಡಲ ಕಾರ್ಯದರ್ಶಿ ಎನ್.ಜಿ. ಸಿದ್ದೇಶ, ಪಂಪ ನಾಯ್ಕ, ವಿವಿಧ ಮೋರ್ಚಾ ಪದಾಧಿಕಾರಿಗಳು, ಕಾರ್ಯಕರ್ತರು ವಿಜಯೋತ್ಸವದಲ್ಲಿ ಪಾಲ್ಗೊಂಡಿದ್ದರು.

ಬಿಜೆಪಿ ಗೆಲುವು ಸಾಧಿಸಿದ್ದಕ್ಕೆ ಸಂಭ್ರಮೋತ್ಸವ

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ಸೋಮವಾರ ಪಂಚರಾಜ್ಯ ಚುನಾವಣೆಯ ಫಲಿತಾಂಶ ಪ್ರಕಟಗೊಂಡ ಹಿನ್ನೆಲೆಯಲ್ಲಿ ಮೂರು ರಾಜ್ಯಗಳಾದ ಪಶ್ಚಿಮ ಬಂಗಾಳ, ಅಸ್ಸಾಂ, ಪಾಂಡಿಚೇರಿ ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದಕ್ಕೆ ಹೊಸಪೇಟೆ ನಗರದ ಡಾ.ಪುನೀತ್ ರಾಜಕುಮಾರ್‌ವೃತ್ತದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

ಮೂರು ರಾಜ್ಯಗಳಲ್ಲಿ ಬಿಜೆಪಿ ಪರವಾದ ಫಲಿತಾಂಶ ಬರುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಪಟೇಲ್ ನಗರದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಜಮಾಯಿಸಿ, ನಂತರ ನಗರದ ಡಾ. ಪುನೀತ್ ರಾಜಕುಮಾರ್‌ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ, ಬಿಜೆಪಿ ಪರವಾದ ಜಯಘೋಷಣೆಗಳನ್ನು ಕೂಗುತ್ತಾ ಹರ್ಷ ವ್ಯಕ್ತಪಡಿಸಿದರು.

ನಗರಸಭೆ ಅಧ್ಯಕ್ಷ ಎನ್. ರೂಪೇಶಕುಮಾರ್, ಉಪಾಧ್ಯಕ್ಷ ಬಿ. ಜೀವರತ್ನಂ, ನಗರಸಭಾ ಸದಸ್ಯರಾದ ಎಸ್.ಎಲ್. ಆನಂದ್, ದ್ವಾರಕೇಶ್, ಬಿಜೆಪಿ ಮಂಡಲ ಅಧ್ಯಕ್ಷ ಶಂಕರ್‌ಮೇಟಿ, ಬಿಜೆಪಿ ಮುಖಂಡರಾದ ಅಶೋಕ್ ಜೀರೇ, ಬಸವರಾಜ ನಲತ್ವಾಡ್, ಗುಜ್ಜಲ್ ಶ್ರೀನಿವಾಸ, ರಾಮಾಜೀ ನಾಯ್ಕ್, ಕಿಚಡಿ ಕೊಟ್ರೇಶ್, ಜಗದೀಶ್ ಕಮಟಗಿ, ರೇವಣಸಿದ್ಧಪ್ಪ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಮಧುರಚನ್ನ ಶಾಸ್ತ್ರಿ ಹಿರೇಮಠ್, ಎಚ್ ನಟರಾಜ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಎಂ.ಬಿ. ಉಮಾದೇವಿ, ಕಾರ್ಯದರ್ಶಿ ಶಾಂತಮ್ಮ ಸೇರಿ ಕಾರ್ಯಕರ್ತರು ವಿಜಯೋತ್ಸವದಲ್ಲಿ ಭಾಗವಹಿಸಿದ್ದರು.



ಹೊಸಪೇಟೆ ನಗರದ ಡಾ. ಪುನೀತ್ ರಾಜಕುಮಾರ್‌ವೃತ್ತದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ,ಸಿಹಿ ಹಂಚಿ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

ಮೂರು ರಾಜ್ಯಗಳಲ್ಲಿ ಜಯಭೇರಿ: ಬಿಜೆಪಿ ಹರ್ಷ



ಸಂಡೂರಿನ ವಿಜಯವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

• **ಕನ್ನಡಪ್ರಭ ವಾರ್ತೆ** ಸಂಡೂರು

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಗಳಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಬಹುಮತ ಗಳಿಸಿ, ಅಧಿಕಾರದ ಗದ್ದುಗೆ ಏರುವಲ್ಲಿ ಯಶಸ್ವಿಯಾದ ಹಿನ್ನೆಲೆಯಲ್ಲಿ ಬಿಜೆಪಿ ಸಂಡೂರು ಮಂಡಲದ ಮುಖಂಡರು ಪಟ್ಟಣದ ವಿಜಯವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಬಿಜೆಪಿ ಸಂಡೂರು ಮಂಡಲ ಅಧ್ಯಕ್ಷ ಅಶೋಕ್ ಕುಮಾರ್, ಬಿಜೆಪಿ ಸಂಡೂರು ಮಂಡಲ ಉಪಾಧ್ಯಕ್ಷ ತಾಯಪ್ಪ, ಪ್ರಧಾನ ಕಾರ್ಯದರ್ಶಿ ನರಸಿಂಹ ಎನ್‌ಟಿಆರ್, ಕಾರ್ಯಾಲಯದ ಕಾರ್ಯದರ್ಶಿ ರಮೇಶ್ ಎನ್.ಎಚ್. ರೈತ ಮೋರ್ಚಾ ಅಧ್ಯಕ್ಷ ವಿ.ಎಸ್. ಶಂಕರ್, ಯುವ ಮೋರ್ಚಾ ಅಧ್ಯಕ್ಷ ಸುರೇಶ್, ಎಸ್‌ಸಿ ಮೋರ್ಚಾ ಅಧ್ಯಕ್ಷ ರಾಜೇಶ್ ಹೆಗಡೆ, ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಮೋಯಿದ್ದೀನ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಚಿರಂಜೀವಿ, ಮುಖಂಡರಾದ ವಸಂತಕುಮಾರ್, ಎಫ್. ಕುಮಾರನಾಯ್ಕ್, ಅಂಜಿನಿ, ಅಬ್ದುಲ್ ವಹಾಬ್, ವಿಜಯಕುಮಾರ್, ಹನುಮೇಶ, ವಿಶ್ವನಾಥರೆಡ್ಡಿ, ರವಿ, ಪಂಪಣ್ಣ, ದೇವೇಂದ್ರಪ್ಪ, ಶಿವು, ಶಂಕರ್, ಮಲಿಯಪ್ಪ ಎಚ್, ನಾಗರಾಜ ಬಿ ಮುಂತಾದವರು ವಿಜಯೋತ್ಸವದಲ್ಲಿ ಭಾಗವಹಿಸಿದ್ದರು.

ಭವಿಷ್ಯದಲ್ಲೂ ದೇಶದ ಬಹುತೇಕ ಕಡೆ ಬಿಜೆಪಿ ಅಧಿಕಾರಕ್ಕೆ

• **ಕನ್ನಡಪ್ರಭ ವಾರ್ತೆ** ಮರಿಯಮ್ಮನಹಳ್ಳಿ

ಪಂಚರಾಜ್ಯ ಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟವಾಗಿ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಟ್ಟಣದ ನಾರಾಯಣದೇವರಕೆರೆ ವೃತ್ತದಲ್ಲಿ ಸ್ಥಳೀಯ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಆಚರಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಎಸ್. ಕೃಷ್ಣನಾಯ್ಕ್ ಮಾತನಾಡಿ, ಪ್ರದಾನಿ ನರೇಂದ್ರ ಮೋದಿ ಮತ್ತು ಅಮೀತ್ ಶಾ ಮೂರು ರಾಜ್ಯಗಳಲ್ಲಿ ನಡೆಸಿದ ಅಭೂತಪೂರ್ವ ಪ್ರಚಾರಕ್ಕೆ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ದೇಶದಲ್ಲಿ ಬಿಜೆಪಿ ಪರವಾದ ಗಾಳಿ ಬೀಸುತ್ತಿದೆ. ಮುಂದಿನ ದಿನಗಳಲ್ಲಿ ದೇಶದ ಬಹುತೇಕ ರಾಜ್ಯಗಳಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ಅವರು ಹೇಳಿದರು.



ಮರಿಯಮ್ಮನಹಳ್ಳಿ ಪಟ್ಟಣದ ನಾರಾಯಣದೇವರಕೆರೆ ವೃತ್ತದಲ್ಲಿ ಸ್ಥಳೀಯ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಆಚರಿಸಿದರು.

ಸ್ಥಳೀಯ ಬಿಜೆಪಿ ಮುಖಂಡರಾದ ಎಸ್.ಎಂ. ವೀರೇಶ್ವರಸ್ವಾಮಿ, ಡಿ. ರಾಘವೇಂದ್ರಶೆಟ್ಟಿ, ಬಂಗಾರಿ ಮಂಜುನಾಥ ಮಾತನಾಡಿದರು.

ಪಟ್ಟಣ ಪಂಚಾಯಿತಿ ಸದಸ್ಯ ಕೆ. ಮಂಜುನಾಥ, ಜಿ.ಪಂ. ಮಾಜಿ ಸದಸ್ಯ ಎಲ್. ಮಂಜುನಾಥ, ಮುಖಂಡರಾದ ಗುಂಡಾ ಕೃಷ್ಣ, ಎಚ್. ರವಿಕಿರಣ್, ಬ್ಯಾಲಕುಂದಿ ಶ್ರೀನಿವಾಸ, ಕಲಾಲ್ ರಾಘವೇಂದ್ರ, ಬಿ. ಆನಂದ, ಜಿ.ಕೆ. ರಾಘವೇಂದ್ರ ಶೆಟ್ಟಿ, ರಾಜೇಶ್, ನರಸಿಂಹ ಮೂರ್ತಿ, ಚಿಲಕನಹಟ್ಟಿ ಅಂಜಿನಿ, ದುರುಗಪ್ಪ, ಶಶಿಕುಮಾರ್, ಅಶೋಕ ದೇವಲಾಪುರ ಸೇರಿದಂತೆ ಇತರರು ವಿಜಯೋತ್ಸವದಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ವಿಜಯೋತ್ಸವ | ದಾವಣಗೆರೆ, ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಯಲ್ಲಿ ಅಭೂತಪೂರ್ವ ಯಶಸ್ಸು

ಉಪಚುನಾವಣೆ ಗೆಲುವು: ಕಾಂಗ್ರೆಸ್‌ನಿಂದ ವಿಜಯೋತ್ಸವ



ಹರಪನಹಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

• **ಕನ್ನಡಪ್ರಭ ವಾರ್ತೆ** ಹರಪನಹಳ್ಳಿ

ದಾವಣಗೆರೆ, ಬಾಗಲಕೋಟೆ ಉಪಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಕ್ಕೆ ಹರಪನಹಳ್ಳಿ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ವಿಜಯೋತ್ಸವ ಆಚರಿಸಿದರು.

ದಾವಣಗೆರೆ, ಬಾಗಲಕೋಟೆ ಚುನಾವಣಾ ಫಲಿತಾಂಶ ಪ್ರಕಟಗೊಂಡು ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ ಕೂಡಲೇ ಇಲ್ಲಿಯ ಡಾ.ಬಿ.ಆರ್.ಅಂಬೇಡ್ಕರ (ಐ ಬಿ. ವೃತ್ತ) ಸರ್ಕಲ್ ನಲ್ಲಿ ಜಮಾವಣೆಗೊಂಡ ಕೈ ಕಾರ್ಯಕರ್ತರು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ ಜನಪರ ಆಡಳಿತ ಹಾಗೂ ಗ್ಯಾರಂಟಿಗಳ ಕೊಡುಗೆಗೆ ಮತದಾರರು ಎರಡು ಕಡೆ ಕೈ ಹಿಡಿದಿದ್ದಾರೆ. ಇನ್ನು ಎರಡು ವರ್ಷ ಉತ್ತಮ ಆಡಳಿತ ಮಾಡುವುದಕ್ಕೆ ಪ್ರೋತ್ಸಾಹಿಸಿ ಬೆನ್ನು ತಟ್ಟಿದ್ದಾರೆ ಎಂದು ಹೇಳಿದರು. ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಬೇರಗೌಡ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕಂಚಿಕೇರಿ ಜಯಲಕ್ಷ್ಮಿ, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಪೂಜಾರ ಕೃಷ್ಣನಾಯ್ಕ, ಮುಖಂಡರಾದ ಟಿ.ವೆಂಕಟೇಶ, ಹುಲ್ಮನಿ ವಸಂತಪ್ಪ, ಮೈದೂರು ರಾಮಣ್ಣ, ಹುಲ್ಲಿಕಟ್ಟಿ ಚಂದ್ರಪ್ಪ, ಕೂಲ್ ಇಫಾರ್ನ್, ಶಮಿಉಲ್ಲಾ, ಸೊವೆಲ್, ಜಿಷಾನ್, ತಿಮ್ಮನಾಯ್ಕ, ಎಚ್. ಕೆ.ಮಂಜುನಾಥ, ಎಲ್.ಮಂಜನಾಯ್ಕ, ಗುಡಿನಾಗರಾಜ, ಸುಮಾ ಜಗದೀಶ, ಬಡಿಗಿ ರಹಮತುಲ್ಲಾ, ಎಂ.ವಿ.ಕೃಷ್ಣ ಇದ್ದರು.

ಗ್ಯಾರಂಟಿಯಿಂದ ಉಪ ಚುನಾವಣೆಯಲ್ಲಿ ಗೆಲುವು

• **ಕನ್ನಡಪ್ರಭ ವಾರ್ತೆ** ಬಳ್ಳಾರಿ



ರಾಜ್ಯ ಸರ್ಕಾರ ಬಡವರ ಕಲ್ಯಾಣಕ್ಕಾಗಿ ಜಾರಿಗೊಳಿಸಿದ ಗ್ಯಾರಂಟಿ ಯೋಜನೆಗಳು, ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಗಳಿಂದಾಗಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಅಭ್ಯರ್ಥಿಗಳ ಗೆಲುವು ಸಾಧ್ಯವಾಯಿತು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ. ಚಿದಾನಂದಪ್ಪ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಉಪ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷವು ಬಾಗಲಕೋಟೆ ಕ್ಷೇತ್ರದ ಅಭ್ಯರ್ಥಿ ಪರವಾಗಿ ಕೆಲಸ ಮಾಡಲು ನನ್ನನ್ನು ಹಾಗೂ ತಾಲೂಕು ಅಧ್ಯಕ್ಷರು,ಸದಸ್ಯರ ತಂಡವನ್ನು ಪಕ್ಷ ನಿಯೋಜಿಸಿತ್ತು. 10 ದಿನಗಳ ಕಾಲ ಮನೆ ಮನೆ ಪ್ರಚಾರ ಮಾಡಿದ್ದೆವು. ಆಗಲೇ ನಮಗೆ ನಾಡಿಮಿಡಿತ ಗೊತ್ತಾಗಿತ್ತು. ಬಾಗಲಕೋಟೆಯ ಜನರು ಕಾಂಗ್ರೆಸ್‌ನ ಅಭಿವೃದ್ಧಿ ಕೆಲಸಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರಲ್ಲದೆ, ಗ್ಯಾರಂಟಿ ಯೋಜನೆಗಳಿಂದ ಬಡ ಜನರಿಗಾದ ಅನುಕೂಲಗಳ ಕುರಿತು ಸ್ಮರಿಸುತ್ತಿದ್ದರು ಎಂದು ಹೇಳಿದರು

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಅವರ ಸಮರ್ಥ ನಾಯಕತ್ವದಿಂದಾಗಿ ರಾಜ್ಯದ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲು ಸಾಧ್ಯವಾಗಿದೆ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಾಗಲಕೋಟೆ ಉಪ ಚುನಾವಣೆಯಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದ್ದು ಅವರ ನಿರೀಕ್ಷೆಯಂತೆಯೇ ಕಾರ್ಯ ನಿರ್ವಹಿಸಿದ ನೆಮ್ಮದಿ ಇದೆ ಎಂದು ತಿಳಿಸಿದರು.

ಫಸಲ್ ಬಿಮಾ ಯೋಜನೆಯಲ್ಲಿ ಭಾರೀ ಅಕ್ರಮ: ಆರೋಪ

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ಹರಪನಹಳ್ಳಿ ತಾಲೂಕಿನಲ್ಲಿ ಫಸಲ್ ಬಿಮಾ ಯೋಜನೆಯಲ್ಲಿ ಅಕ್ರಮ ನಡೆದಿದೆ ಎಂದು ರಾಜ್ಯ ರೈತ ಸಂಘವು ಆರೋಪಿಸಿ ವಿಜಯನಗರ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.ತಾಲೂಕಿನ ಹಾರಕನಾಳ್ ಗ್ರಾಪಂ ವ್ಯಾಪ್ತಿಯ ನಡೆದ ಬಿಮಾ ಫಸಲ್ ಯೋಜನೆ ಅಡಿ ನಡೆದಿರುವ ಅಕ್ರಮಗಳ ಬಗ್ಗೆ ಕಮಿಷನರ್ ಗಮನಕ್ಕೆ ತರಲಾಗಿದೆ. ಜಿಲ್ಲಾಧಿಕಾರಿ ಮುತುವರ್ಜಿ ವಹಿಸದೇ ತಹಶೀಲ್ದಾರ್‌ನೇತೃತ್ವದಲ್ಲಿ ಸಮಿತಿ ಮಾಡಿ ಕಳಿಸಿದ್ದೀರಿ, ಆದರೆ ಸ್ಥಳೀಯ ತಾಸಿಲ್ದಾರ್‌ಮತ್ತು ಸಂಬಂಧಪಟ್ಟ ಅಧಿಕಾರಿಗಳು ನ್ಯಾಯಯುತವಾಗಿ ಕೆಲಸ ನಿರ್ವಹಿಸಿಲ್ಲ.

ಬಯಲುಸೀಮೆ ಭೂಮಿ ಮತ್ತು ನೀರಾವರಿ ಭೂಮಿ, ಸಿಸಿ ಕಟಿಂಗ್ ತಾರತಮ್ಯವಾಗಿದೆ ಎಂದು ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ ಆರೋಪಿಸಿದರು. ಉದ್ದೇಶಪೂರ್ವಕವಾಗಿ ನೀರಾವರಿ ಜಮೀನಿನ ಸಿಸಿ ಕಟಿಂಗ್ ನ್ನು ಬಯಲುಸೀಮೆ ಭೂಮಿಗೆ ಸೇರಿಸಿದ್ದಾರೆ. ಇನ್ಸುರೆನ್ಸ್ ಕಂಪನಿ ಒಟಿಪಿ ಬಂದರೆ ಮಾತ್ರ ಸಿಸಿ ಕಟ್ಟಿಂಗ್ ಮಾಡಬೇಕು. ಆದರೆ ಓಟಿಪಿ ಬಾರದಿದ್ದರೂ ಸಿಸಿ ಕಟಿಂಗ್ ಮಾಡಿದ್ದಾರೆ. ಮುಂಗಾರು ಬೆಳೆಯಲ್ಲಿ ಶೇ.75 ನೀರಾವರಿಗೆ 127 ಬಯಲುಸೀಮೆ ಭೂಮಿಗೆ ಸಿಸಿ ಕಟ್ಟಿಂಗ್ ತೋರಿಸಿರುತ್ತಾರೆ. ಇದು ಅವೈಜ್ಞಾನಿಕ ಎಂದರು.

ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಿ ನ್ಯಾಯ ಒದಗಿಸಬೇಕು. ಇಲ್ಲವಾದರೆ ರೈತರು ಬೀದಿಗಳಿದು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ವಿಜಯನಗರ ಜಿಲ್ಲಾ ಯುವ ಘಟಕದ ಜಿಲ್ಲಾಧ್ಯಕ್ಷ ರವಿಕುಮಾರ್‌ತಂಬ್ರಹಳ್ಳಿ, ರೈತ ಮುಖಂಡರಾದ ಹಾಲೇಶ್ ನಾಯಕ್, ಬಸವರಾಜಯ್ಯ, ಹರೀಶ್, ಲೋಕೇಶ್ ನಾಯಕ ಮನವಿಯಲ್ಲಿ ಒತ್ತಾಯಿಸಿದ್ದಾರೆ.

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No(s) 30025-30028 OF 2024
WITH PRAYER FOR INTERIM RELIEF

HARISH KUMAR (DEAD) BY LRS AND OTHERS ....Petitioner(s)
VERSUS
THE STATE OF KARNATAKA AND OTHERS ....Respondent(s)

To,

1 **SRI.DALI MUNIYAPPA,** AGED ABOUT 65 YEARS, S/O MUNI OBALAPPA, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU -560110. KARNATAKA.	**PID: 98100/2026 FOR R[19] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
2 **SMT.B.V. RATHNAMMA,** AGED ABOUT 60 YEARS, D/O LATE VENKATARAMAIAH, R/A NO.33, 12TH E CROSS, MAGADI ROAD, BENGALURU-560023., KARNATAKA.	**PID: 98101/2026 FOR R[21] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
3 **SRI.H.CHANDRAKEERTHI,** AGED ABOUT 41 YEARS, S/O LATE HANUMAIAH, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU-560110, KARNATAKA	**PID: 98102/2026 FOR R[24] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
4 **SMT.PARVATHAMMA,** AGED ABOUT 71 YEARS, D/O LATE DASAPPA, RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA.	**PID: 98103/2026 FOR R[34] IN IN SLP(C) NO. 30025/2024, SLP© NO. 30026/ 2024SLP(C) NO.30025-30028/2024 (SEC IV-A)**
5 **SRI.NARASIMHA MURTHY,** S/O LATE PUTTAIAH, AGED ABOUT 55 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98104/2026 FOR R[35] IN IN SLP(C) NO. 30025/2024, SLP(C) NO. 30026/2024SLP(C) NO.30025-30028/2024 (SEC IV-A)**
6 **SRI.NARASIMHA MURTHY,** SON OF LATE MALLAIAH AGED ABOUT 63 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98105/2026 FOR R[36] IN IN SLP(C) NO. 30025/2024SLP(C) NO.30025-30028/2024 (SEC IV-A)**
7 **V.HARISH KUMAR,** S/O LATE M.VENKATARAMAIAH, MAJOR, R/O NO.33, 13TH STREET, AGRAHARA DASARAHALLI, MAGADI ROAD, BANGALORE-560079. KARNATAKA	**PID: 98106/2026 FOR R[60] IN IN SLP(C) NO. 30027/2024SLP(C) NO.30025-30028/2024 (SEC IV-A)**
8 **R.SHOBHA,** D/O Y.RAMAKRISHNA, W/O M.C. KESHAVAMURTHY, AGED ABOUT 37 YEARS, R/A NO.11/1, 1ST MAIN, 1ST CROSS, VALMIKINAGAR, MYSORE ROAD, BANGALORE-560026 KARNATAKA.	**PID: 98107/2026 FOR R[61] IN IN SLP(C) NO. 30027/2024SLP© NO.30025-30028/2024 (SEC IV-A)**
9 **SAROJAMMA,** AGED ABOUT 77 YEARS, W/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA.	**PID: 98108/2026 FOR R[66] IN IN SLP(C) NO.30028/2024SLP© NO.30025-30028/2024 (SEC IV-A)**
10 **SRI. M. S MOHAN KUMAR,** ABOUT 60 YEARS, S/O LATE K.N SRINIVASA GUPTA. RESIDING AT NO.9, BANASHANKARI, 2ND STAGE, 100 FEET ROAD, 4TH BLOCK, BANGALORE-560083., KARNATAKA.	**PID: 98109/2026 FOR R[67] IN IN SLP(C) NO. 30028/2024SLP(C) NO.30025-30028/2024 (SEC IV-A)**
11 **SRI.K.S. SURENDRA BABU,** AGED ABOUT 51 YEARS, S/O LATE K.N SRINIVASA GUPTA.RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA	**PID: 98110/2026 FOR R[68] IN IN SLP(C) NO. 30028/2024SLP(C) NO.30025-30028/2024 (SEC IV-A)**
12 **SRI.K.S VISHWAKIRAN,** AGED ABOUT 46 YEARS, S/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083., KARNATAKA.	**PID: 98111/2026 FOR R[69] IN IN SLP(C) NO.30028/2024SLP© NO.30025-30028/2024 (SEC IV-A)**
13 **SRI. R. V. SUDHIR,** S/O LATE RAJA VENKATARAMANA SHETTY. RESIDING AT NO.37/55, SURVEYOR ROAD, BASAVANAGUDI, BENGALURU-560004 KARNATAKA.	**PID: 98112/2026 FOR R[72] IN IN SLP(C) NO. 30028/2024SLP© NO.30025-30028/2024 (SEC IV-A)**
14 **RUDRA MURTHY** S/O H. S. SADASHIVAIAH, R/O ILLALU VILLAGE, YESWANTHAPURA HOBLI BENGALURU NORTH TALUK -560056, KARNATAKA.	**PID: 98113/2026 FOR R[77] IN IN SLP(C) NO.30028/2024SLP© NO.30025-30028/2024 (SEC IV-A)**
15 **CHANDRAN** S/O LATE NANJUNDAPPA, R/O ILLALU VILLAGE YESWANTHAPURA HOBLI, BENGALURU NORTH TALUK-560056 KARNATAKA	**PID: 98113/2026 FOR R[77] IN IN SLP(C) NO. 30028/2024SLP(C) NO.30025-30028/2024 (SEC IV-A)**
16 **NARASAPPA** S/O BASAPPA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98115/2026 FOR R[79] IN IN SLP(C) NO.30028/2024SLP(C) NO.30025-30028/2024 (SEC IV-A)**
17 **GANGARAJU** S/O NAGARAJU, R/O ILLALU VILLAGE YESWANTHAPURA HOBLI BENGALURU NORTH TALUK – 560056. KARNATAKA	**PID: 98116/2026 FOR R[80] IN IN SLP(C) NO. 30028/2024SLP(C) NO.30025-30028/2024 (SEC IV-A)**
18 **MUDDUHAHONNAIAH** S/O JAYANNA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98117/2026 FOR R[81] IN IN SLP(C) NO.30028/2024SLP(C) NO.30025-30028/2024 (SEC IV-A)**
19 **CHANDRAPPA** S/O LATE RAJAPPA, R/O ILLALU VILLAGE YESWANTHAPURA HOBLI BENGALURU NORTH TALUK – 560056 KARNATAKA	**PID: 98118/2026 FOR R[82] IN IN SLP(C) NO.30028/2024SLP(C) NO.30025-30028/2024 (SEC IV-A)**

WHEREAS the Petition for SPECIAL LEAVE PETITION (CIVIL) to Appeal with application for EXEMPTION FROM FILING O.T., EXEMPTION FROM FILING C/C OF THE IMPUGNED JUDGMENT, CONDONATION OF DELAY IN FILING, DISMISSAL OF APPEAL, INTERVENTION/IMPLEADMENT, EXEMPTION FROM FILING O.T., APPLICATION FOR SUBSTITUTION, EARLY HEARING APPLICATION, PERMISSION TO FILE APPLICATION FOR DIRECTION, EXEMPTION FROM APPOINTMENT OF OFFICIAL TRANSLATOR, PERMISSION TO FILE ADDITIONAL DOCUMENTS/FACTS/ANNEXURES, PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., PERMISSION TO FILE APPLICATION FOR TO FILE DIRECTION, PERMISSION ADDITIONAL DOCUMENTS/FACTS/ANNEXURES above mentioned (copy enclosed) filed in the Registry by Ms. JAYASREE NARASIMHAN, Advocate on behalf of the Petitioner above named was listed for hearing before this Court on 09th December, 2024 along with the connected matters, when the Court was pleased to inter-alia pass the following order:-
"SPECIAL LEAVE PETITION (CIVIL) DIARY NO.
53577/2024
1.Delay condoned.
2. Issue notice.
3.Till the next date of hearing, the possession of the disputed property shall not be disturbed
WHEREAS, the matter was listed for hearing before this Court on 09th April, 2026 along with the connected matters, when the Court was pleased to pass the following order:-
"1. Mr. Kapil Sibal, learned senior counsel appearing for the State of Karnataka in SLP(C) No. 28248-28258/2024, submits that documents dating back to 1890 have since been traced which would prove the character of the lands in dispute as gomal'. According to him, these documents need to be placed on record since they have a material bearing on the special leave petitions under consideration.
2. Let such additional documents be placed on record by filing an appropriate application within three weeks.
3. Exception to such application may be taken by the petitioners within a week thereafter.
4. We have heard Mr. Debal Banerji, learned senior counsel appearing for K.S. Subbaraju - respondent No.7 in SLP (C) No. 30028/2024 in support of the prayer that the said petition should be dismissed.
5. Considering the submissions made by Mr. Sibal recorded above that the Government has since traced old records to the effect that disputed lands are 'gomal', we are of the considered opinion that the application seeking dismissal of SLP (C) No. 30028/2024 ought to be heard along with the special leave petitions.
6. Re-list the special leave petitions and all connected applications ca 21st May, 2026 at 12:00 noon.
7. Interim order, passed earlier, shall continue till the next date of hearing.
8. The latest office report has been read. Some of the respondents are yet to be served.
9. Fresh steps be taken by the State of Karnataka to effect service through paper publication, within two weeks from date. Notice may be published in one English daily newspaper, viz. Deccan Herald and one Kannada newspaper, viz. Kannada Prabha.
10. Once the paper publications are made, the related documents be filed before the Registry a week prior to the returnable date. Put up an appropriate office report."

NOW, THEREFORE, TAKE NOTICE that the above petition will be posted for hearing before this Court on 21st May, 2026 at 10.30 O' Clock in the forenoon or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.
You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPS and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted..
TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.
Dated: 13th April, 2026
Copy to :-
1 Mr. Anirudh Sanganeria (adv.), **2** Ms. Jayasree Narasimhan (adv.), **3** Mr. Deepak Prakash (adv.) **4** Mr. Lzafeer Ahmad B. F. (adv.), **5** Ms. Patil Rekha Chandra Gouda (adv.), **6** Ms. Smriti Churiwal (adv.), **7** Mr. Javedur Rahman (adv.), **8** Mr. Vishnu Sharma A.s. (adv.)

Sd/-
ASSISTANT REGISTRAR
DIPR/CP/496/Zen/2026-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಕಾ,ನೀ,ನಿ,ನಿ ತುಮಕೂರು

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ; 01/2026–27 ದಿನಾಂಕ: 29.04.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ರೂ:–36.51 ಲಕ್ಷ ದಿಂದ 379.40 ಲಕ್ಷದವರೆಗಿನ 02 ಕೆಲಸ ಕಾಮಗಾರಿಗಳ ಟೆಂಡರ್‌ನ್ನು ದ್ವಿ–ಲಕೋಟೆ ಪದ್ದತಿಯಲ್ಲಿ KTPP ನಿಬಂಧನೆಗಳೊಂದಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 06.05.2026 ಸಂಜೆ 4.00 ಗಂಟೆ ವರೆಗೆ. ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 4.05.2026 ರಿಂದ 13.05.2026 ಸಂಜೆ 4.00 ಗಂಟೆ ವರೆಗೆ ತಾಂತ್ರಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:– 14.05.2026 ಸಂಜೆ 4.30ಗಂಟೆ ನಂತರ. ಆರ್ಥಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:–16.05.2026 ಬೆಳಗ್ಗೆ 11.00 ಗಂಟೆ ನಂತರ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ).
ಇ.ಎಂ.ಡಿ ಮೊತ್ತ, ಕಾಲಾವಧಿ, ಕಾಮಗಾರಿಗಳ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು
DIPR/TUM/46/KSMCA/2026-27

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ) ರವರ ಕಛೇರಿ, ಅನೆಕ್ಸ್ ಕಟ್ಟಡ–2, ಜಿ.ಬಿ.ಎ ಕೇಂದ್ರ ಕಛೇರಿ, ಬೆಂಗಳೂರು–02.

ಸಂಖ್ಯೆ: GBA/2025-26/IND0001-Call-3/IND0002-Call-3/ IND0003-Call-2/IND0005-Call-2 ದಿನಾಂಕ: 04.05.2026

ಟೆಂಡರ್ ಅಧಿಸೂಚನೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಅರ್ಹ ಟೆಂಡರ್‌ದಾರರಿಂದ ಕೆಳಕಂಡ ಕಾಮಗಾರಿಗಾಗಿ ಅಲ್ಪಾವಧಿಯ ಮರು–ಟೆಂಡರ್ ಆಹ್ವಾನಿಸಲಾಗಿದ್ದು, ಜಿಬಿಎ ವ್ಯಾಪ್ತಿಯ ಐದು ಕಾರ್ಪೊರೇಷನ್‌ಗಳ ನಮ್ಮ ಕ್ಲಿನಿಕ್‌ಗಳಿಗೆ ಅಗತ್ಯವಿರುವ 243 ರೆಫ್ರಿಜಿರೇಟರ್‌ಗಳು (180–200 ಲೀಟರ್), 243 ಸೆಂಟ್ರಿಫ್ಯೂಜ್ ಯಂತ್ರಗಳು, ಲಸಿಕೆ ಸಂಗ್ರಹಣೆಗೆ ಕೋಲ್ಡ್ ಬಾಕ್ಸ್, ವ್ಯಾಕ್ಯುಟೈನರ್ ಮತ್ತು ಪಿಪೆಟ್ ಸೆಟ್‌ಗಳ ಪೂರೈಕೆಗಾಗಿ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ:

1	ಟೆಂಡರ್ ಉಲ್ಲೇಖ ಸಂಖ್ಯೆ:	GBA/2025-26/IND0001-Call-3/ IND0002-Call-3/IND0003-Call-2/IND0005-Call-2
2	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ.	04.05.2026 ರಿಂದ
3	ಪೂರ್ವ–ಟೆಂಡರ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ:	06.05.2026 ರಂದು ಬೆಳಿಗ್ಗೆ 11:30 ಗಂಟೆಗೆ ಸ್ಥಳ: ಮುಖ್ಯ ಆರೋಗ್ಯಾಧಿಕಾರಿ ಕಛೇರಿ, ನೆಲ ಮಹಡಿ, ಅನುಬಂಧ–3 ಕಟ್ಟಡ, ಎನ್.ಆರ್.ವೃತ್ತ, ಬೆಂಗಳೂರು–560002.
4	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	06.05.2026 ಸಂಜೆ 5:00 ಗಂಟೆಯೊಳಗೆ
5	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	14.05.2026 ಸಂಜೆ 5:00 ಗಂಟೆಯೊಳಗೆ
6	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ.	15.05.2026 ಸಂಜೆ 5:10 ಗಂಟೆಗೆ
7	ಮಾದರಿ ಪ್ರದರ್ಶನ ದಿನಾಂಕ ಮತ್ತು ಸಮಯ:	ತಾಂತ್ರಿಕ ಬಿಡ್ ತೆರೆಯುವಿಕೆಯ ನಂತರ ತಿಳಿಸಲಾಗುವುದು
8	ಸಂಪರ್ಕಕ್ಕಾಗಿ ವಿಳಾಸ	ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ), ಮುಖ್ಯ ಆರೋಗ್ಯಾಧಿಕಾರಿ ಕಛೇರಿ, ನೆಲ ಮಹಡಿ, ಅನೆಕ್ಸ್ ಕಟ್ಟಡ–2, ಎನ್.ಆರ್. ವೃತ್ತ, ಬೆಂಗಳೂರು–560002. ಇ–ಮೇಲ್: choph515@gmail.com. ದೂರವಾಣಿ: 9845208571

ಈ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತ ಸೇವಾ ಪೂರೈಕೆದಾರರು ಕೆಪಿಪಿ ಪೋರ್ಟಲ್ **(https://kppp.karnataka.gov.in)** ಮೂಲಕ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)
ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರವರ ಕಛೇರಿ,
ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ–2:ಟೆಂಡರ್–06:2026–27 ದಿನಾಂಕ: 04.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಗಳ ವಿವರ:– ಕೆಪಿಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ:–ಲೆಕ್ಕ ಶೀರ್ಷಿಕೆ: 3054–04–337–1–10–200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ :–
(1) ಹೊಸದುರ್ಗ ತಾಲ್ಲೂಕಿನ ಕಲ್ಕೆರೆಯಿಂದ ಮಲ್ಲೇನಹಳ್ಳಿ ಕ್ರಾಸ್ ಮಾರ್ಗ ಬಲ್ಲಾಳಸಮುದ್ರ ಆಲಘಟ್ಟ ಮಲ್ಲೇನಹಳ್ಳಿ ಸಂಪರ್ಕಿಸುವ ರಸ್ತೆ ಮತ್ತು ಆಲಘಟ್ಟದಿಂದ ವಡ್ಡರಹಟ್ಟಿಗೆ ಕೂಡು ರಸ್ತೆಯ ಕಿ.ಮೀ 0.00 ರಿಂದ ಕಿ.ಮೀ 2.55 (ಕಡೂರು ತಾಲ್ಲೂಕು ಗಡಿ) ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ (ವ.ಇಂ. 34940)/4ನೇ ಕರೆ
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)120.00
ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 08–05–2026 ಸಮಯ 17–30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 11–05–2026 ಸಮಯ 16–00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 12–05–2026 ಸಮಯ 16–15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 14–05–2026 ಸಮಯ 11–00
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 91 9240214000 ಮತ್ತು 91 9240214001 ರಿಂದ ಮಾಹಿತಿ ಪಡೆಯಬಹುದು

DIPR/CTA/KSMCA/ 85/2026-27
ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಧರ್ಮದ ಬಗೆಗಿನ ವಿಪರೀತ ಅಭಿಮಾನವೇ ಮತಾಂಧತೆ: ನಿರ್ಭಯಾನಂದ ಸರಸ್ವತಿ ಶ್ರೀ

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಯಾವುದೇ ವ್ಯಕ್ತಿ ಅಥವಾ ಧರ್ಮ ಬೋಧಕ ತನ್ನ ಧರ್ಮದ ಬಗ್ಗೆ ವಿಪರೀತ ಅಭಿಮಾನ ಬೆಳೆಸುತ್ತಾ ಹೋದಲ್ಲಿ ಕ್ರಮೇಣ ಅದು ಮತಾಂಧತೆಯಾಗಿ ಬದಲಾಗುತ್ತದೆ ಎಂದು ಗದಗ-ವಿಜಯಪುರ ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ನಿರ್ಭಯಾನಂದ ಸರಸ್ವತಿ ವಿವರಿಸಿದರು.

ನಗರದ ಪಾಂಚಜನ್ಯ ಸಭಾಂಗಣದಲ್ಲಿ ವಿವೇಕ ಮಂಟಪದಿಂದ ಹಮ್ಮಿಕೊಂಡಿದ್ದ ಉಪನ್ಯಾಸ ಮಾಲಿಕೆಯಲ್ಲಿ ವಿವೇಕ ಲೀಲಾಮೃತ ಕುರಿತು ಅವರು ಮಾತನಾಡಿದರು.

ಯಾವ ಧರ್ಮಕ್ಕೆ ಯುವಜನತೆ ಇಂದು ಮಾರು ಹೋಗುತ್ತಿದ್ದಾರೆಯೋ ಆ ಧರ್ಮಕ್ಕೆ ಸನ್ಯಾಸ ಪರಂಪರೆಯೇ ಇಲ್ಲ. ಅಂತಃಸತ್ವವೂ ಇಲ್ಲ. ಯಾವುದೇ ಧರ್ಮ ಸಂಖ್ಯಾಬಲದಿಂದ ಶ್ರೇಷ್ಠತೆ ಪಡೆದುಕೊಳ್ಳುವುದಿಲ್ಲ. ಹಿಂದೂ ಧರ್ಮದ ಶಕ್ತಿ, ಸತ್ವ ಏನಿದೆ ಎಂಬುದು ಅರಿಯದ ಇಂದಿನ ಯುವ ಸಮುದಾಯ ಹಾಕಿದ ಅಂಗಿಯನ್ನು ಬದಲಾಯಿಸಿ ದಷ್ಟೇ ಸುಲಭವಾಗಿ ಧರ್ಮವನ್ನು ಬದಲಾಯಿಸುತ್ತಿದ್ದಾರೆ.

ನಾನು ಯಾವ ಧರ್ಮಕ್ಕೆ ಸೇರಿದ್ದೇನೆ. ನನ್ನ ಧರ್ಮದ ಮಹತ್ವ ಏನು? ಹಿನ್ನಲೆ ಏನು? ಪರಂಪರೆ ಏನು? ಎಂಬುದು ಗೊತ್ತಿಲ್ಲದೇ ಅನ್ಯ ಧರ್ಮಗಳತ್ತ ಮೊರೆ ಹೋಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜನತಾ ಬಜಾರ್‌ಅಧ್ಯಕ್ಷೆ ಪಲ್ಲೇದ ಮೈತ್ರಿ, ತಾಪಂ ಮಾಜಿ ಅಧ್ಯಕ್ಷ ವದ್ದಟ್ಟಿ ವೈ.ನಾರಾಯಣ ರೆಡ್ಡಿ ಮುಖ್ಯ ಅತಿಥಿಗಳಾಗಿ



ವಿವೇಕಾನಂದರ ಪುತ್ಥಳಿಗೆ ಗಣ್ಯರು ಪುಷ್ಪಾರ್ಪಣೆ ಮಾಡಿದರು.

ಭಾಗವಹಿಸಿದ್ದರು. ಲೆಕ್ಕ ಪರಿಶೋಧಕರಾದ ಸಿದ್ಧರಾಮೇಶ್ವರ ಗೌಡ ಕರೂರು, ಎರಿಸ್ವಾಮಿ ಚಿಲ್ಕರಾಗಿ ಕಾರ್ಯಕ್ರಮ ನಿರ್ವಹಿಸಿದರು. ರಂಗತೋರಣ ಕಾರ್ಯದರ್ಶಿ ಪ್ರಭುದೇವ ಕಪ್ಪಗಲ್ಲು, ಎಂಜಿನಿಯರ್‌ಎಂ.ಜಿ.ಗೌಡ, ಪಲ್ಲೇದ ಬಸವರಾಜ್, ವಕೀಲ ಗಡಗಿ ರಾಕೇಶ್, ಲೆಕ್ಕ ಪರಿಶೋಧಕ ಕೆ.ರಾಜಶೇಖರ, ಎಬಿವಿಪಿಯ ಭರತ್ ತಳವಾರ, ವಿವೇಕ ಮಂಟಪದ ಕಾರ್ಯದರ್ಶಿ ಡಾ.ಎಸ್.ಕೃಷ್ಣ, ಚಂದ್ರಶೇಖರ ಗೌಡ ದರೂರು, ಲೆಕ್ಕಪರಿಶೋಧಕರ ಸಂಘದ ಅಧ್ಯಕ್ಷ ಪುರುಷೋತ್ತಮ ರೆಡ್ಡಿ ದಮ್ಮೂರು, ಐಟಿಐ ಕಾಲೇಜು ಪ್ರಾಂಶುಪಾಲ ಪಂಡಿತಾರಾಧ್ಯ, ರಶ್ಮಿ ಪಂಡಿತಾರಾಧ್ಯ, ಸುರೇಖಾ, ಗೀತಾ, ಸವಿತಾ ಇದ್ದರು. ರಾಜ್ಯೋತ್ಸವ ಪುರಸ್ಕೃತ ರಂಗಭೂಮಿ ಕಲಾವಿದೆ ವೀಣಾ ಆದವಾನಿ ಹೇಮರೆಡ್ಡಿ ಮಲ್ಲಮ್ಮ ನಾಟಕದ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಮುದ್ದಟನೂರು ಎಚ್.ತಿಪ್ಪೇಸ್ವಾಮಿ ಹಾರ್ಮೋನಿಯಂ, ಯೋಗೀಶ್ ಸಂಗನಕಲ್ಲು ತಬಲಾ ಸಾಥ್ ನೀಡಿದರು.

ಕರ್ನಾಟಕ ಸರ್ಕಾರ
ಅಬಕಾರಿ ಇಲಾಖೆ
ಅಬಕಾರಿ ಆಯುಕ್ತರ ಕಛೇರಿ, 2ನೇ ಮಹಡಿ, ಟಿ,ಟಿ,ಎಂ.ಸಿ. ಎ ಬ್ಲಾಕ್, ಬಿ.ಎಂ.ಟಿ.ಸಿ.ಕಟ್ಟಡ ಶಾಂತಿನಗರ, ಬೆಂಗಳೂರು–560027.

Tender No:- EXCISE/2026-27/SE0184
(https://kppp.karnataka.gov.in)

ಇ–ಟೆಂಡರ್ ಪ್ರಕಟಣೆ

ಅಬಕಾರಿ ಆಯುಕ್ತರ ಕಛೇರಿಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆದುರಾಗಿ **Non-Technical** ವಿಭಾಗದಲ್ಲಿ **(ಬೆಳಚ್ಚುಗಾರರು(16), ವಾಹನ ಚಾಲಕರು(16), ಸ್ವಚ್ಛತಾ ಸಿಬ್ಬಂದಿ(6), ಮತ್ತು Technical ವಿಭಾಗದಲ್ಲಿ ಸಿಸ್ಟಮ್ ಅನಾಲಿಸ್ಟ್ (01) ಮತ್ತು ಜೂನಿಯರ್ ಪ್ರೋಗ್ರಾಮರ್ (02) ಸೇವೆಯನ್ನು 2026–27ನೇ ಸಾಲಿನ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಟೆಂಡರ್‌ನ್ನು https://kppp.karnataka.gov.in ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದ್ದು, ಇಚ್ಛೆಯುಳ್ಳ ಅರ್ಹ ಸಂಸ್ಥೆಗಳು** ಷರತ್ತು ನಿಬಂಧನೆಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದು. ಸದರಿ ಇ–ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿವೆ.
1) ಇ–ಟೆಂಡರ್ ಅಂದಾಜು ವಾರ್ಷಿಕ ಮೊತ್ತ **ರೂ. 88,25,272/–** (ಎಂಭತ್ತೆಂಟು ಲಕ್ಷದ ಇಪ್ಪತ್ತೈದು ಸಾವಿರದ ಎರಡು ನೂರ ಎಪ್ಪತ್ತೆರಡು ಮಾತ್ರ), 2) ಇ.ಎಂ.ಡಿ ಮೊತ್ತ **ರೂ. 2,00,000/–** (ಎರಡು ಲಕ್ಷ ರೂಪಾಯಿಗಳು ಮಾತ್ರ). 3) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **15.05.2026 ರಂದು ಸಂಜೆ 5.30** ಗಂಟೆವರೆಗೆ. 4) ಟೆಂಡರ್ ತೆರೆಯುವ ದಿನಾಂಕ ಮತ್ತು ಸ್ಥಳ: **16.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು,** ದೂರವಾಣಿ ಸಂಖ್ಯೆ: **080–22220302**, ಇ–ಮೇಲ್:**ecexcise@gmail.com.**
ಹೆಚ್ಚಿನ ಮಾಹಿತಿಯನ್ನು ಅಬಕಾರಿ ಆಯುಕ್ತರ ಕಛೇರಿಯ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ: **080–22220302** ನ್ನು ಸಂಪರ್ಕಿಸಲು ಕೋರಿದೆ.

ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/500/2026–27
ಸಹಿ/–
ಅಬಕಾರಿ ಆಯುಕ್ತರ ಪರವಾಗಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:36/2025–26/2ನೇ ಕರೆ ದಿನಾಂಕ: 30.04.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ: 5054–80–190–0–01–132–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಅಡಿಯಲ್ಲಿ ಅನುಮೋದನೆಯಾಗಿರುವ ನಂಜನಗೂಡು ಉಪವಿಭಾಗ, ನಂಜನಗೂಡು ವ್ಯಾಪ್ತಿಯ "ನಂಜನಗೂಡು ತಾಲ್ಲೂಕು, ರಾಮನಾಥಪುರ–ತೆರಕಣಾಂಬಿ ರಾಜ್ಯ ಹೆದ್ದಾರಿ 86ರ ರಸ್ತೆಯ ಸರಪಳಿ 109.90 ರಲ್ಲಿ ಸೇತುವೆ ಮರು ನಿರ್ಮಾಣ ಕಾಮಗಾರಿ"ಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ "ಅರ್ಹ" ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/): ದಿ:30.04.2026 ರಿಂದ 08.05.2026ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಇ.ಎಂ.ಡಿ ಮೊತ್ತ ರೂ.4.76 ಲಕ್ಷಗಳಾಗಿರುತ್ತದೆ. ಮತ್ತು ಪೂರ್ವಭಾವಿ ಸಭೆಯನ್ನು ದಿ:04.05.2026ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.
DIPR/DDMYS/132/KSMCA/111/2026-27

ಕೆರೆಯಲ್ಲಿ ಮುಳುಗಿ ಯುವಕ ಸಾವು

ಕೂಡ್ಲಿಗಿ: ಗೆಳೆಯನ ಜತೆ ಹೇರ್



ಕಂಟಿಂಗ್ ಮಾಡಿಸಿಕೊಂಡು ನಂತರ ಕೆರೆಗಿಳಿದು ಸ್ನಾನ ಮಾಡುವಾಗ ನೀರಿನಲ್ಲಿ ಮುಳುಗಿ ಯುವಕನೋರ್ವ ಮೃತಪಟ್ಟ ಘಟನೆ ಭಾನುವಾರ ತಾಲೂಕಿನ ಕಾನಾಹೊಸಹಳ್ಳಿಯ ಹೊರವಲಯದ ಕೆರೆಯಲ್ಲಿ ನಡೆದಿದೆ. ಸೋಮವಾರ ಮೃತದೇಹ ಪತ್ತೆಯಾಗಿದೆ. ತಾಲೂಕಿನ ಸಿದ್ದಾಪುರ ವಡ್ಡರಹಟ್ಟಿಯ ಅರುಣ್ (19) ಮೃತ ಯುವಕ. ಕಳೆದ ಎರಡು ವಾರಗಳ ಹಿಂದೆ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ತೇರ್ಗಡೆಯಾಗಿದ್ದ ಈತ ನಂತರ ಬೇಸಿಗೆ ರಜೆಯಲ್ಲಿ ಮಂಡ್ಯಕ್ಕೆ ಕೂಲಿ ಕೆಲಸಕ್ಕೆ ಹೋಗಿದ್ದ. ಸಂಬಂಧಿಕರ ಮದುವೆ ಹಿನ್ನೆಲೆ ಸ್ವಗ್ರಾಮಕ್ಕೆ ಭಾನುವಾರ ಬಂದಿದ್ದ. ಮನೆಯಿಂದ ಗೆಳೆಯರ ಜತೆ ಹೇರ್‌ಕಟಿಂಗ್ ಮಾಡಿಸಿಕೊಳ್ಳಲು ಕಾನಾಹೊಸಹಳ್ಳಿಗೆ ಬಂದಿದ್ದ. ತನ್ನ ಇಬ್ಬರು ಗೆಳೆಯರ ಜತೆ ಕೆರೆಯಲ್ಲಿ ಈಜಾಡಲು ಹೋಗಿದ್ದಾಗ ಘಟನೆ ಸಂಭವಿಸಿದೆ. ವಿಷಯ ತಿಳಿದ ನಂತರ ಸ್ಥಳೀಯರು ಮತ್ತು ಪೊಲೀಸರು ಕೆರೆಯಲ್ಲಿ ಕತ್ತಲಾಗುವವರೆಗೆ ಹುಡುಕಿದರೂ ಮೃತದೇಹ ಪತ್ತೆಯಾಗಿರಲಿಲ್ಲ. ಕಾನಹೊಸಹಳ್ಳಿ ಪೊಲೀಸರು ದಾವಣಗೆರೆ ಜಿಲ್ಲೆಯ ಹರಿಹರದ ನಾಲ್ವರು ಈಜು ತಜ್ಞರನ್ನು ಸೋಮವಾರ ಕರೆಸಿ ನೀರಿನಲ್ಲಿ ಮೃತದೇಹ ಪತ್ತೆಯಾಗಿದೆ. ಈ ಬಗ್ಗೆ ಕಾನಹೊಸಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಹಾಯವಾಣಿ ಆರಂಭ

ಹೊಸಪೇಟೆ: ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಬರ ಪರಿಸ್ಥಿತಿ ಉಂಟಾಗಿದೆ. ಗ್ರಾಮೀಣ ಭಾಗದ ಜನರಿಗೆ ಕುಡಿವ ನೀರಿನ ಸಮಸ್ಯೆ ಉಂಟಾದಲ್ಲಿ ಅಂತಹ ಸಮಸ್ಯೆ ದಾಖಲಿಸಿಕೊಂಡು ಆ ಸಮಸ್ಯೆ ನಿವಾರಿಸಲು ಮತ್ತು ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ತಾಪಂನಲ್ಲಿ ಕಂಟ್ರೋಲ್ ರೂಂ ಸಹಾಯವಾಣಿ ಸಂಖ್ಯೆ ಸ್ಥಾಪಿಸಲಾಗಿದೆ. ಕುಡಿಯುವ ನೀರು ಸರಬರಾಜು ಅಥವಾ ಸಮಸ್ಯೆ ಉಂಟಾದಲ್ಲಿ 9945681246ಗೆ ಸಂಪರ್ಕಿಸಬಹುದು ಎಂದು ತಾಪಂ ಇಒ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಔದ್ಯಮಿಕ ನ್ಯಾಯಾಧೀಕರಣ, ನ್ಯಾಯ ದೇಗುಲ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು–560 027

ಸೂಚನೆ

ಕ್ರಮ ಸಂ.	ಅರ್ಜಿದಾರರು	ಪ್ರತಿವಾದಿ	ಅರ್ಜಿ ಕ್ರಮ ಸಂಖ್ಯೆ	ವಿಚಾರಣೆ ದಿನಾಂಕ
1	ವಿಭಾಗೀಯ ನಿಯಂತ್ರಣಾಧಿಕಾರಿ, ಈಶಾನ್ಯ ವಲಯ, ಬೆಂ.ಮ.ಸಾ.ಸಂಸ್ಥೆ.	ರವಣಪ್ಪ ಆರ್ ವಿ S/o ವೆಂಕಟರಾಮಪ್ಪ, ಜೇಕವಾಂಡ್ಲಪಲ್ಲಿ ಗ್ರಾಮ, ಬಾಗೇಪಲ್ಲಿ ತಾಲ್ಲೂಕು, ಕೋಲಾರ ಜಿಲ್ಲೆ–561 207	SLA No. 395/2025	12.05.2026

ಮೇಲೆ ಹೆಸರಿಸಿರುವ ಅರ್ಜಿದಾರರು ಮೇಲ್ಕಂಡ ಪ್ರತಿವಾದಿಯನ್ನು ಬೆಂ.ಮ.ಸಾ.ಸಂಸ್ಥೆಯ ಸೇವೆಯಿಂದ ವಜಾಗೊಳಿಸಲು ಕೈಗಾರಿಕಾ ವಿವಾದ ಕಾರ್ಮಿಕ ಕಾಯ್ದೆ ಪರಿಚ್ಛೇದ 33 (2) (ಬಿ) ರಡಿಯಲ್ಲಿ ಅನುಮೋದನೆ ಕೋರಿರುತ್ತಾರೆ. ಆದ್ದರಿಂದ ಮೇಲೆ ನಮೂದಿಸಿರುವ ವಿಚಾರಣಾ ದಿನಾಂಕದಂದು ಬೆಳಗ್ಗೆ 11:00 ಗಂಟೆಗೆ ಗೌರವಾನ್ವಿತ ಔದ್ಯಮಿಕ ನ್ಯಾಯಾಲಯ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು– 560 027, ಇಲ್ಲಿ ಹಾಜರಾಗಿ ಪ್ರತಿವಾದಿ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು.

ಸಹಿ/– (ಶಿರಸ್ತೆದಾರರು), ಔದ್ಯಮಿಕ ನಾಯಾಧೀಕರಣ

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. . 8431235858 / 8431235867
ಇ–ಮೇಲ್ : : ifablimited@gmail.com, ವೆಬ್‌ಸೈಟ್ :-www.ifabindia.org

IFAB/2025-26/PM/WORK_INDENT3/CALL-4 Date: 30.04.2026

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದ ಬಲವರ್ಧನೆ ಯೋಜನೆಯ ಡಬಲ್ ಡೀಪ್ ರ‍್ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್ ಇತ್ಯಾದಿಗಳನ್ನು ಒಳಗೊಂಡಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಮತ್ತು ಹೂವಿನ ಶೇಖರಣಾ ಕೋಲ್ಡ್ ರೂಮ್‌ಗಳ ನಿರ್ಮಾಣ ಟೆಂಡರ್ ಪ್ರಕಟಣೆ

IFAB ಲಿಮಿಟೆಡ್ ನಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಎರಡು ಬಿಡ್ ಸಿಸ್ಟಮ್ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದಲ್ಲಿ **RIDF** ಅಡಿಯಲ್ಲಿ ಡಬಲ್ ಡೀಪ್ ರ‍್ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್, ಇತ್ಯಾದಿ ಸೇರಿದಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಹಾಗೂ ಹೂವಿನ ಸಂಗ್ರಹಣೆ ಕೋಲ್ಡ್ ರೂಮ್‌ಗಳ ನಿರ್ಮಾಣ **(IFAB/2025-26/PM /WORK_INDENT3/CALL-4)**ಕ್ಕಾಗಿ ದಿ: **30.04.2026** ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ವಿವರ ಮತ್ತು ದಾಖಲೆಗಳು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೊರ್ಟಲ್‌ನಲ್ಲಿ ಮಾತ್ರ ದಿನಾಂಕ: **30.04.2026** ರಿಂದ ಲಭ್ಯವಿರುತ್ತದೆ, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 11.05.2026 ರ ಸಂಜೆ 4.00 ಗಂಟೆ** ಆಗಿರುತ್ತದೆ.
ದಯವಿಟ್ಟು ಗಮನಿಸಿ, ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಟೆಂಡರ್ ದಾಖಲೆಯಲ್ಲಿ ಕೊನೆಯ ದಿನಾಂಕ ವ್ಯತ್ಯಾಸವಾಗಿ ಕೈತಪ್ಪಿನಿಂದ 23.04.2026 ಎಂದು ನಮೂದಿಸಲಾಗಿದೆ. ಅದನ್ನು **11.05.2026** ಎಂದು ಓದಿಕೊಳ್ಳಲು ವಿನಂತಿಸಲಾಗಿದೆ.

ವಾ.ಸಾ.ಸಂ.ಇ/ವಾಪ್ರ/480/ಶಿರಡಿ ಸಾಯಿ/2026–27
ಸಹಿ/–
ವ್ಯವಸ್ಥಾಪಕ ನಿರ್ದೇಶಕರು